ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಅಕ್ಟೋಬರ್ 2013 ಮಾಸ ಪತ್ರಿಕೆ

ಸಂಪುಟ : 36
ಸಂಚಿಕೆ : 1
ಪುಟ : 12
ಬೆಲೆ : ₹ 5/-




A Journal of Karnataka State Secondary Teachers' Association

# ಸಂಪಾದಕೀಯ

ಶಿಕ್ಷಕ ಮಿತ್ರರಿಗೆಲ್ಲ ನವರಾತ್ರಿ ಹಬ್ಬದ ಶುಭಾಶಯಗಳು. ದಸರೆಯ ರಜೆ ಸವಿದು ಹೊಸ ಉತ್ಸಾಹದೊಂದಿಗೆ ತಮ್ಮ ವಿದ್ಯಾರ್ಥಿಗಳನ್ನು ರೂಪಿಸಲು ಶಿಕ್ಷಕರು ಸಜ್ಜಾಗುತ್ತಿದ್ದಾರೆ. ಈ ವರ್ಷ ಉತ್ತಮ ಮಳೆಯಿಂದಾಗಿ ನಾಡಿನ ಜನ ಉತ್ಸಾಹದಿಂದ ಶರನ್ನವರಾತ್ರಿಯನ್ನು ಆಚರಿಸಲು ಸಾಧ್ಯವಾಗಿದೆ. ಪ್ರತಿ ವರ್ಷದಂತೆ ಈ ವರ್ಷವೂ ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ವಿಜೃಂಭಣೆಯ ದಸರಾ ಉತ್ಸವ ನಡೆದಿದೆ. ಅಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಂಗೀತ, ಸಾಹಿತ್ಯ ಕಾರ್ಯಕ್ರಮಗಳು ಎಲ್ಲರ ಮನಸೆಳೆದಿದೆ. ವಿಜಯದಶಮಿಯಂದು ನಡೆದ ಜಂಬೂಸವಾರಿ ಉತ್ಸವ ದೇಶ ವಿದೇಶಗಳ ಜನರನ್ನು ಆಕರ್ಷಿಸಿದೆ. ನವರಾತ್ರಿಯಲ್ಲಿ ದುಷ್ಟ ಶಕ್ತಿಯ ಪ್ರತೀಕವಾದ ಮಹಿಷಾಸುರನನ್ನು ಸಂಹರಿಸಿದ ಶಕ್ತಿದೇವತೆ ಚಾಮುಂಡೇಶ್ವರಿಯನ್ನು ವಿಶೇಷವಾಗಿ ಪೂಜಿಸಲಾಗುತ್ತದೆ. ಆದರೂ ದೇಶದ ಎಲ್ಲೆಡೆ ಭ್ರಷ್ಟಾಚಾರ, ಲಂಚಕೋರತನ, ದರೋಡೆ, ಕೊಲೆ, ಸುಲಿಗೆ, ಹಗರಣಗಳು ರಾರಾಜಿಸುತ್ತಿದೆ. ಇದಕ್ಕೆಲ್ಲಾ ಕೊನೆಯೇ ಇಲ್ಲವೇ? ಎಂಬ ಪ್ರಶ್ನೆ ಕಾಡುತ್ತದೆ. ಸಮಾಜದ ಈ ದುಷ್ಟಶಕ್ತಿಗಳನ್ನು ಸಂಹರಿಸಲು ತಾಯಿ ಚಾಮುಂಡೇಶ್ವರಿ ಇನ್ನೂ ಮನಸ್ಸು ಮಾಡಿಲ್ಲವೇಕೆ? ಎಂಬ ಚಿಂತೆ ಮೂಡುತ್ತದೆ. ಪ್ರಾಯಶಃ ಆ ತಾಯಿಗೆ ಈ ಕಷ್ಟಗಳನ್ನು ಮೌನವಾಗಿ ಸಹಿಸುತ್ತಿರುವ ಜನರು ಅನ್ಯಾಯದ ವಿರುದ್ಧ ಪ್ರತಿಭಟಿಸಲಿ ಎಂಬ ಆಶಯವಿರಬಹುದು. God helps those who help themselves ಎನ್ನುವಂತೆ.

ಅಕ್ಟೋಬರ್ 2 ಮಹಾತ್ಮ ಗಾಂಧಿಯವರ ಜನ್ಮದಿನ. ಆ ದಿನ ದೇಶದೆಲ್ಲೆಡೆ ಕಾರ್ಯಕ್ರಮಗಳು ನಡೆಯುತ್ತವೆ. ಸಮಾರಂಭಗಳಲ್ಲಿ ರಾಜಕಾರಣಿಗಳು ರಾಷ್ಟ್ರಪಿತ ಗಾಂಧೀಜಿಯವರನ್ನು ಹಾಡಿ ಹೊಗಳುತ್ತಾರೆ. ಅವರು ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟು ಬ್ರಿಟಿಷ್‌ರನ್ನು ಓಡಿಸಿದುದನ್ನು ಭರ್ಜರಿ ಭಾಷಣ ಮಾಡುತ್ತಾರೆ. ಆದರೆ ಗಾಂಧೀಜಿಯವರ ಸತ್ಯ, ಅಹಿಂಸೆ, ನಿಸ್ವಾರ್ಥತೆ ವೇದಿಕೆಯಲ್ಲಿರುವವರೆಗೆ ಮಾತ್ರ. ನೆನಪಿರುತ್ತದೆ. ಮರುಕ್ಷಣ ಎಲ್ಲವೂ ಮರೆಯಾಗುತ್ತದೆ. ಗಾಂಧಿಯವರು 'ಸರ್ವೋದಯ' ತತ್ವದ ಮೂಲಕ ಕಂಡ ಸಮಾಜದ ಏಳಿಗೆ, ರಾಮರಾಜ್ಯದ ಕನಸು ನಮಗಾರಿಗೂ ನೆನಪಿಗೇ ಬರುವುದಿಲ್ಲ?

ಗಾಂಧೀ ಜಯಂತಿಯಂದೇ ಲಾಲ್ ಬಹದ್ದೂರ್ ಶಾಸ್ತ್ರಿಯವರ ಹುಟ್ಟಿದ ಹಬ್ಬವೂ ಹೌದು. ಲಾಲ್‌ಬಹುದ್ದೂರ್ ಶಾಸ್ತ್ರಿಯವರು ನೆಹರೂ ನಂತರ ನಮ್ಮ ದೇಶದ ಯಶಸ್ವೀ ಪ್ರಧಾನಿಗಳಾಗಿದ್ದವರು. ಪ್ರಧಾನ ಮಂತ್ರಿಗಳಾದ ನಂತರವೂ ತಮಗಾಗಿ ಒಂದು ಸ್ವಂತ ಮನೆ ಮಾಡಿಕೊಳ್ಳದ ಸರಳ, ಪ್ರಾಮಾಣಿಕ, ನಿಸ್ವಾರ್ಥರು. 'ಜೈ ಜವಾನ್, ಜೈ ಕಿಸಾನ್' ಘೋಷಣೆ ಕೊಟ್ಟವರು. ಗಾಂಧೀ ಜಯಂತಿಯ ಆಚರಣೆಯ ಭರದಲ್ಲಿ ನಮಗೆ ಲಾಲ್‌ಬಹದ್ದೂರರು ನೆನಪಿಗೇ ಬರುವುದಿಲ್ಲ. ಹೀಗೇಕೆ?

ನಮ್ಮ ದೇಶದ ಎರಡು ಕಣ್ಣು. ರಾಮಾಯಾಣ ಮತ್ತು ಮಹಾಭಾರತ ಮಹಾಕಾವ್ಯಗಳು, ಮರ್ಯಾದಾ ಪುರುಷೋತ್ತಮನಾದ ರಾಮನ ಚರಿತೆಯನ್ನು ರಾಮಾಯಣದಲ್ಲಿ ಚಿತ್ರಿಸಿರುವ ಮಹಾಕವಿ, ಮಹರ್ಷಿ ವಾಲ್ಮೀಕಿಯವರ ಜಯಂತಿಯೂ ಈ ತಿಂಗಳೇ. ಶ್ರೀರಾಮಚಂದ್ರನ ನಡತೆ ನಮಗೆಲ್ಲಾ ಆದರ್ಶವಾಗಬೇಕು. ಶಕ್ತಿದೇವತೆ ಚಾಮುಂಡಾಬೆಯು ಮನುಷ್ಯರ ಮನಸ್ಸಿನಲ್ಲಿರುವ ದುಷ್ಟಶಕ್ತಿಗಳನ್ನೂ, ನಿಗ್ರಹಿಸಿ ಸದ್ಭಾವನೆ, ಸದಾಚಾರಗಳು ನೆಲೆಸುವಂತೆ ಕರುಣಿಸಿ ಸಮಾಜದಲ್ಲಿ ನೆಮ್ಮದಿ ಉಂಟಾಗುವಂತೆ ಮಾಡಲಿ ಎಂದು ಆಶಿಸೋಣ.

ಸಂಪಾದಕ

# ವಿವೇಕವಾಣಿ




ದೈಹಿಕ, ಮಾನಸಿಕ, ಆಧ್ಯಾತ್ಮಿಕ ತರಬೇತಿ ಪಡೆಯುವ ಪ್ರತಿಯೊಬ್ಬ ಮನುಷ್ಯನನ್ನೂ ಮಹಿಳೆಯನ್ನೂ ಯುವಕನನ್ನೂ ನಾನು ಕೇಳುವ ಒಂದು ಪ್ರಶ್ನೆಯೆಂದರೆ ಇದು; ಶಕ್ತಿಶಾಲಿಯಾಗಿರುವೆಯಾ? ನೀನು ಶಕ್ತಿವಂತನೆಂದು ನಿನಗನಿಸುವುದೇ? ಎಂದು. ಏಕೆಂದರೆ, ಶಕ್ತಿಯೊಂದೇ ನಮ್ಮನ್ನು ಪರಮ ಸತ್ಯದೆಡೆಗೆ ಕರೆದೊಯ್ಯುವಂಥದು ಎಂಬುದನ್ನು ನಾನು ಅರಿತಿದ್ದೇನೆ.

# ಪರಿವಿಡಿ


- ಶಿಕ್ಷಕ ಸಂಘದ ರಾಜ್ಯಕಾರ್ಯಕಾರಿಣಿ ಸಭೆ 3
- ಕಿಮ್ಮನೆಯವರಿಗೊಂದು ಸುಮ್ಮನೆ ಪತ್ರ 5
- ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ 6
- ಸುತ್ತೋಲೆ 8
- ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ 8
- ಪ್ರಾಥಮಿಕ ಶಾಲಾ ಹಂತದಲ್ಲಿ ಇಂಗ್ಲೀಷ್ ಭಾಷಾ ಬೋಧನೆ 10
- ಜೀವನ ಮೌಲ್ಯಗಳನ್ನು ಕಲಿಸುವ ರೀತಿ 11

# ರಾಜ್ಯಕಾರ್ಯಕಾರಿಣಿ ಸಭೆ

ದಿನಾಂಕ 7–10–2013ರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಕಾರ್ಯಕಾರಿಣಿ ಸಭೆಯನ್ನು ಬೆಳಗಾವಿಯಲ್ಲಿನ ತಿಲಕವಾಡಿ ಪ್ರೌಢಶಾಲೆಯಲ್ಲಿ ಏರ್ಪಡಿಸಲಾಗಿತ್ತು. ಸಂಘದ ಅಧ್ಯಕ್ಷರಾದ ಶ್ರೀ ಕೆ. ಬಾಲಕೃಷ್ಣ ಭಟ್‌ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಸಭೆ ಬೆಳಗ್ಗೆ 11 ಗಂಟೆಗೆ ಸರಿಯಾಗಿ ಸರಸ್ವತಿ ವಂದನೆಯೊಂದಿಗೆ ಆರಂಭವಾಯಿತು. ತಿಲಕವಾಡಿ ಪ್ರೌಢಶಾಲೆಯ ಮಕ್ಕಳು ದೀಪಪ್ರಜ್ವಲನದ ನಂತರ ಗಣೇಶ ಸ್ತುತಿ ಪ್ರಾರ್ಥನೆಯನ್ನು ಮಾಡಿದರು. ಶಾಲೆಯ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ವಿ.ಎಲ್. ಆಜಾದ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಉದ್ಘಾಟನಾ ಭಾಷಣ ಮಾಡುತ್ತಾ 'ಇಂದಿನ ದಿನಗಳಲ್ಲಿ ಶಿಕ್ಷಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಿಡಿ ಬಿಡಿಯಾಗಿ ವಿವರಿಸಿದರು. ಶಿಕ್ಷಕ, ಬೋಧನೆಗಿಂತ ಹೆಚ್ಚಾಗಿ ಗುಮಾಸ್ತೆ ಕೆಲಸವನ್ನೇ ಮಾಡಬೇಕಾಗಿರುವ ಬಗ್ಗೆ ತಮ್ಮ ಕಳವಳ ವ್ಯಕ್ತಪಡಿಸಿದರು. ಈ ಸಮಸ್ಯೆಗೆ ಸಂಬಂಧಿಸಿದಂತೆ ಶಿಕ್ಷಕ ಸಂಘ, ಸಂಬಂಧ ಪಟ್ಟವರೊಡನೆ ಚರ್ಚಿಸಿ ಸೂಕ್ತ ಪರಿಹಾರ ಕಂಡು ಕೊಳ್ಳಬೇಕಾಗಿ ಹೇಳಿದರು'.

ಶಿಕ್ಷಕ ಸಂಘದ ಕಳೆದ ಮೂರು ತಿಂಗಳ ಕಾರ್ಯ ಚಟುವಟಿಕೆಗಳ ಬಗ್ಗೆ ಪ್ರಧಾನ ಕಾರ್ಯದರ್ಶಿ ಶಿವಾನಂದ ಸಿಂಧನಕೇರಾರವರು ಮಾಹಿತಿ ನೀಡಿದರು. ನಂತರ ಜಿಲ್ಲಾ ಪದಾಧಿಕಾರಿಗಳು, ಜಿಲ್ಲಾ ವರದಿಗಳನ್ನು ಸಭೆಗೆ ನೀಡಿದರು. ಮುಂಬರಲಿರುವ ದಿನಗಳಲ್ಲಿ ಸಂಘಟನೆ ಕೈಗೊಳ್ಳಬಹುದಾದ ಕಾರ್ಯಕ್ರಮಗಳನ್ನು ಪ್ರಧಾನ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು.

ಅಖಿಲ ಭಾರತೀಯ ಶೈಕ್ಷಿಕ ಮಹಾ ಸಂಘದ (ಎ.ಬಿ.ಆರ್.ಎಸ್.ಎಂ.) ಆಶ್ರಯದಲ್ಲಿ ಡಿಸೆಂಬರ್ 26–27ರಂದು ಮುಂಬೈನಲ್ಲಿ ನಡೆಯಲ್ಲಿರುವ ಮಹಿಳಾ ಕಾರ್ಯಕರ್ತೆಯರ ಅಭ್ಯಾಸ ವರ್ಗ ಹಾಗೂ 30–31ರಂದು ಗುಜರಾತ್‌ನಲ್ಲಿ ನಡೆಯಲಿರುವ ಉನ್ನತ ಶಿಕ್ಷಣ ವಿಭಾಗದ ಶೈಕ್ಷಣಿಕ ಸಮಾವೇಶದ ಬಗ್ಗೆ ಪ್ರಧಾನ ಕಾರ್ಯದರ್ಶಿಗಳು ಮಾಹಿತಿ ನೀಡಿದರು.

ಹಲವಾರು ಶೈಕ್ಷಣಿಕ ಹಾಗೂ ಶಿಕ್ಷಕರ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು. ಶಾಲೆಗಳಲ್ಲಿ ನಡೆಯುತ್ತಿರುವ ಬಿಸಿಯೂಟ ಹಾಗೂ ಬಿಸಿಯೂಟ ತಯಾರಿಕೆಯ ಬಗ್ಗೆ ಶಿಕ್ಷಕರು ಅನುಭವಿಸುತ್ತಿರುವ ಸಮಸ್ಯೆಗಳ ಬಗ್ಗೆ ಎಳೆ ಎಳೆಯಾಗಿ ಚರ್ಚಿಸಲಾಯಿತು. ನಂತರ ಬಿಸಿಯೂಟದ ಪರಿಣಾಮವಾಗಿ ಉಂಟಾಗಿರುವ ಶೈಕ್ಷಣಿಕ ಕುಸಿತದ ಬಗ್ಗೆ ಭಾಗವಹಿಸಿದ್ದ ಅನೇಕ ಶಿಕ್ಷಕರು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು.

ಶಾಲೆಗಳಲ್ಲಿ ಮೌಲ್ಯ ಶಿಕ್ಷಣದ ಬಗ್ಗೆ ಡಾ. ರಾಧಾಕೃಷ್ಣನ್ ವರದಿಯಿಂದ ಕೊಠಾರಿ ಕಮೀಷನ್ ವರದಿಯವರೆಗೆ ಬಗ್ಗೆ ನೀಡಿರುವ ವರದಿ ಹಾಗೂ ಇಂದಿನ ಶಿಕ್ಷಣದಲ್ಲಿ ಅವರ ವರದಿಯನ್ನು ಅಳವಡಿಸದಿರುವ ಬಗ್ಗೆ ಸಹಾ ಸಭೆಯಲ್ಲಿ ಚರ್ಚಿಸಲಾಯಿತು.

ಈ ಎರಡೂ ಅಂಶಗಳನ್ನು ಕುರಿತು ಎರಡು ಠರಾವುಗಳನ್ನು ಸಭೆಯು ಸರ್ವಾನುಮತದಿಂದ ಅನಮೋದಿಸಿತು. ಹಾಗೂ ಈ ಠರಾವುಗಳನ್ನು ಸರ್ಕಾರಕ್ಕೆ ಮತ್ತು ವಿದ್ಯಾ ಇಲಾಖೆಗೆ ಸಲ್ಲಿಸಬೇಕೆಂದು ನಿರ್ಧರಿಸಲಾಯಿತು.

## ಪ್ರಸ್ತಾವನೆಗಳು

**ಬೆಳಗಾವಿಯಲ್ಲಿ ದಿನಾಂಕ 7–10–2013 ರಂದು ನಡೆದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಅನುಮೋದಿತವಾದ ಪ್ರಸ್ತಾವನೆಗಳು.**

### ಪ್ರಸ್ತಾವನೆ – 1. ಬಿಸಿಯೂಟದ ಯೋಜನೆಯು ಪ್ರಭಾವೀ ಪಾರದರ್ಶಕ ಹಾಗೂ ಕೌಶಲ್ಯಪೂರ್ಣ ವ್ಯವಸ್ಥೆ ಆಗುವ ಬಗ್ಗೆ :–

ಬಿಸಿಯೂಟದ ಮೂಲ ಉದ್ದೇಶವಾದ ಪ್ರಾರಂಭಿಕ ಶಿಕ್ಷಣದ ವಿಸ್ತಾರ ಹಾಗೂ ಪ್ರಸಾರದ ಜೊತೆಗೆ, ಮಕ್ಕಳ ಹಾಜರಾತಿಯಲ್ಲಿ ವೃದ್ಧಿ, ಮಕ್ಕಳ ಪೌಷ್ಟಿಕತೆಯ ಕೊರತೆ ನೀಗಿಸುವುದು. ಶಾಲೆ ಬಿಡುವ ಮಕ್ಕಳ ಸಂಖ್ಯೆಯನ್ನು ಕಡಿಮೆಮಾಡುವುದು. ಬಿಸಿಯೂಟದ ಮೂಲ ಉದ್ದೇಶವು ಸಾಕಷ್ಟು ಸಫಲವಾಗಿ ಮಕ್ಕಳಿಗೆ ಶಿಕ್ಷಣದಲ್ಲಿ ಅಭಿರುಚಿ ಬೆಳೆಸುವುದರ ಮೂಲಕ, ಸರ್ವಾಂಗೀಣ ಶಿಕ್ಷಣದ

(4ನೇ ಪುಟಕ್ಕೆ.....)

3 ನೇ ಪುಟದಿಂದ...

## ಪ್ರಸ್ತಾವನೆ ಬಗ್ಗೆ

ಅಭಿವೃದ್ಧಿಯಾಗಿದೆ. ಆದರೆ ಈ ಕಾರ್ಯಕ್ರಮದ ಜಾರಿಯ ಜವಾಬ್ದಾರಿಯು ಸಂಪೂರ್ಣ ಶಿಕ್ಷಕರ ಮೇಲೆ ಹೇರಿದ್ದು, ಅವರ ಮೂಲ ಕಾರ್ಯವಾದ ಬೋಧನಾಕಾರ್ಯವೇ ಸ್ಥಗಿತಗೊಳ್ಳುವ ಮಟ್ಟಕ್ಕೆ ಬಂದು ತಲುಪಿದೆ. ಈ ಯೋಜನೆ ಜಾರಿಯಲ್ಲಿ ಶಾಲೆಯ ಒಬ್ಬಿಬ್ಬರು ಶಿಕ್ಷಕರನ್ನು ತೊಡಗಿಸಿ ಕೊಳ್ಳುವುದು ಅನಿವಾರ್ಯವಾಗಿದೆ. ಹಾಗೂ ಶಾಲೆಯ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಿರುವುದು ಚಿಂತಾಜನಕವಾಗಿದೆ.

ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಈ ಯೋಜನೆಯ ಜಾರಿ ಬಹಳ ಗೊಂದಲಮಯವಾಗಿದೆ. ಕಾರಣವೇನೆಂದರೆ ದಿನಸಿ ಮತ್ತು ತರಕಾರಿ ಸರಬರಾಜಿನಲ್ಲಿ ಏರುಪೇರಾಗುವುದು ಹಾಗೂ ಅಡಿಗೆಗೆ ಬೇಕಾಗುವ ಸಾಮಗ್ರಿಗಳ ಕೊರತೆ ಉಂಟಾಗುವುದು.

ಈ ಯೋಜನೆಯನ್ನು ಪ್ರಭಾವಿ ಹಾಗೂ ಪಾರದರ್ಶಿ ಗೊಳಿಸಿ, ಇದು ಸರಿಹೊಂದಲು, ಈ ಜವಾಬ್ದಾರಿಯನ್ನು ಸರಿಯಾದ ವ್ಯವಸ್ಥಾಪಕರಿಗೆ ವಹಿಸುವುದರೊಂದಿಗೆ ಈ ಕಾರ್ಯಕ್ರಮದ ಜವಾಬ್ದಾರಿಯಿಂದ ಶಿಕ್ಷಕರನ್ನು ಮುಕ್ತಗೊಳಿಸುವ ಪರಿವರ್ತನೆ ತರಬೇಕಾಗಿದೆ. ಒಂದು ಸಮೀಕ್ಷೆಯ ಪ್ರಕಾರ ಈಗ ಓದುತ್ತಿರುವ ತರಗತಿ ವಿದ್ಯಾರ್ಥಿಗಳು ತಮ್ಮ ಹಿಂದಿನ ತರಗತಿಯ ಪ್ರತಿಶತ 70 ರಷ್ಟು ಹಿಂದುಳಿದಿದ್ದಾರೆ. ಆದುದರಿಂದ ಕೂಡಲೇ ಶಿಕ್ಷಕರನ್ನು ಶೈಕ್ಷಣೇತರ ಕಾರ್ಯಗಳಿಂದ ಮುಕ್ತಗೊಳಿಸಬೇಕಾಗಿದೆ.

ಈ ಯೋಜನೆಯ ಮೂಲ ಉದ್ದೇಶದ ಜಾರಿಗಾಗಿ ಯೋಜನೆಯು ಪುನರ್ ರಚನೆಗೊಳ್ಳಬೇಕಾಗಿದೆ. ದಿನಸಿ ಖರೀದಿ, ತರಕಾರಿ ಖರೀದಿ, ಅಡುಗೆ ತಯಾರಿ ಮತ್ತು ವಿತರಣೆ ಇತರ ಸಂಗತಿಗಳನ್ನು ಅನುಭವಿ ಸಂಸ್ಥೆಗಳಿಗೆ (NGO) ವಹಿಸುವುದರ ಮೂಲಕ ಯೋಜನೆಯನ್ನು ಪ್ರಭಾವಿ ಹಾಗೂ ಪಾರದರ್ಶಿಗೊಳಿಸಬಹುದಾಗಿದೆ.

ಆದುದರಿಂದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಕರ್ನಾಟಕ ಸರ್ಕಾರವನ್ನು ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮವನ್ನು ಜಾರಿಗೊಳಿಸಲು ಒಂದು ಸ್ವತಂತ್ರ ಸಂಸ್ಥೆಯನ್ನು ರಚಿಸಿ ಮತ್ತು ಈ ಯೋಜನೆಯಲ್ಲಿ ಶಿಕ್ಷಕರನ್ನು ಕೇವಲ ಮೇಲ್ವಿಚಾರಣೆಯಲ್ಲಿ ತೊಡಗಿಸಿ ಅವರ ಮೇಲಿನ ಅತಿಯಾದ ಹೊರೆಯುನ್ನು ಕಡಿಮೆ ಮಾಡಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತದೆ.

### ಪ್ರಸ್ತಾವನೆ 2– ಶಾಶ್ವತ ಜೀವನ ಮೌಲ್ಯಗಳಿಂದ ಕೂಡಿದ ಶಿಕ್ಷಣ ಪದ್ಧತಿಯನ್ನು ಪುನಃ ಜಾರಿಗೆ ತರುವ ಬಗ್ಗೆ

ಇಂದು ನಮ್ಮ ಸಾಮಾಜಿಕ ಚಿಂತನೆ, ಭಾರತೀಯ ಮೌಲ್ಯಗಳಾದ 'ವಸುದೈವ ಕುಟುಂಬಕಂ' ಅಂದರೆ ವಿಶ್ವವೇ ಒಂದು ಪರಿವಾರ ಎಂಬ ಕಲ್ಪನೆಗೆ ಬದಲಾಗಿ 'ವಿಶ್ವ ಒಂದು ಮಾರುಕಟ್ಟೆ' ಎಂಬ ಘೋಷಣೆಗೆ ಬದಲಾಗುತ್ತಿದೆ. ಅಂದರೆ ಪ್ರೀತಿ, ಪ್ರೇಮ, ವಿಶ್ವಾಸ, ನಂಬಿಕೆ, ಪ್ರಾಮಾಣಿಕತೆ, ಸಂಬಂಧ, ಬಾಂಧವ್ಯಕ್ಕಿಂತಲೂ ತಾನು ಬದುಕಿ ಬೇರೆಯವರನ್ನು ಬದುಕಲು ಬಿಡು ಎಂಬ ನಾಲ್ನುಡಿಗೆ ಬದಲಾಗಿ ಶಕ್ತಿವಂತರಿಗೆ ಮಾತ್ರ ಬದುಕುವ ಹಕ್ಕು ಎಂಬ ವಿಚಾರಕ್ಕೆ ಪುಷ್ಠಿ ದೊರಕಿದೆ.

ಇದರಿಂದಾಗಿ ಇಂದು ಭ್ರಷ್ಟಾಚಾರ, ಅತ್ಯಾಚಾರ, ಭಯ ಮತ್ತು ಅಶಾಂತಿಯ ವಾತಾವರಣವನ್ನು ಸಮಾಜದ ಎಲ್ಲಾ ಕಡೆಗಳಲ್ಲೂ ಕಾಣಬಹುದಾಗಿದೆ. ಇಂದು ರಸ್ತೆಗಳು, ನಗರಗಳು ಜನರಿಂದ ತುಂಬಿ ತುಳುಕುತ್ತಿದ್ದರೂ ಮನುಷ್ಯ ಮಾತ್ರ ಒಂಟಿತನವನ್ನು ಅನುಭವಿಸುತ್ತಿದ್ದಾನೆ. ಅವಿಭಕ್ತ ಕುಟುಂಬಗಳು ಒಡೆದು ನುಚ್ಚುನೂರಾಗುತ್ತಿದೆ.

ಸಾಮಾಜಿಕ ಮತ್ತು ಮಾನವೀಯ ಮೌಲ್ಯಗಳಾದ ಪರಸ್ಪರ ಸ್ನೇಹ, ಪ್ರೇಮ, ಸಹಯೋಗ, ಸಹಾನುಭೂತಿ, ಪ್ರಾಮಾಣಿಕತೆ, ಸಹಿಷ್ಣುತೆ, ಕರ್ತವ್ಯ ನಿಷ್ಠೆ, ವಿವೇಕಶೀಲತೆ ಮತ್ತು ಉದಾರತೆಯ ಕೊರತೆಗಳನ್ನು ಸಮಾಜದಲ್ಲಿ ಕಾಣುತ್ತಿದ್ದೇವೆ.

ಇಂದಿನ ಈ ವ್ಯವಸ್ಥೆಗೆ ವರ್ತಮಾನ ಶಿಕ್ಷಣ ಪದ್ಧತಿಗೆ ಕಾರಣವಾಗಿದ್ದು, ಶಿಕ್ಷಣದಲ್ಲಿ ವ್ಯಕ್ತಿಗತ, ಕೌಟುಂಬಿಕ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಸೇರಿಸುವುದರಲ್ಲಿ ವಿಫಲಗೊಂಡಿದ್ದೇವೆ. ಈ ಸಮಸ್ಯೆಗೆ ಸಂಪೂರ್ಣ ಪರಿಹಾರವನ್ನು 1938 ರಿಂದ ಶೈಕ್ಷಣಿಕ ಸುಧಾರಣೆಗಾಗಿ, ಆಯೋಜಿತಗೊಂಡು ಡಾ. ರಾಧಾಕೃಷ್ಣನ್ ಆಯೋಗ(1948–49) ಮೊದಲಿಯಾರ್ ಆಯೋಗ (1952–53), ಡಾ. ಕೊಠಾರಿ ಆಯೋಗ (1964–66) ರಾಷ್ಟ್ರೀಯ ಶಿಕ್ಷಣ ನೀತಿ (1986) ಮುಂತಾದ ಎಲ್ಲಾ ಆಯೋಗಗಳು ಕಂಡುಕೊಂಡು ಮೌಲ್ಯ ಶಿಕ್ಷಣದ ಬಗ್ಗೆ ಒತ್ತಿಹೇಳಿವೆ.

ಇತ್ತೀಚಿನ ದೆಹಲಿಯ ಹೆಣ್ಣುಮಗಳು ನಿರ್ಭಯಾಳ ಮೇಲಾದ ಅತ್ಯಾಚಾರದ ಘಟನೆ ದೇಶದ ಜನಮಾನಸವನ್ನು ಕಲಕಿ ಶಿಕ್ಷಣದಲ್ಲಿ ನೈತಿಕ ಮೌಲ್ಯಗಳನ್ನು ಕಲಿಸಬೇಕೆಂಬುದು ಜನಸಾಮಾನ್ಯರ ಅಭಿಪ್ರಾಯವಾಗಿದೆ. ಹಿಮಾಚಲ ಪ್ರದೇಶ ಸರ್ಕಾರವು ಇತ್ತೀಚೆಗೆ ನೀತಿ ಶಿಕ್ಷಣಕ್ಕಾಗಿ ಪಠ್ಯ ಪುಸ್ತಕಗಳನ್ನು ರಚಿಸಿ ಬಿಡುಗಡೆ ಮಾಡಿವೆ. ನಮ್ಮ ದೇಶದ ಶಿಕ್ಷಕರ ಅತಿ ದೊಡ್ಡ ಸಂಘಟನೆಯಾದ ಅಖಿಲ ಭಾರತೀಯ ಶೈಕ್ಷಿಕ

(9ನೇ ಪುಟಕ್ಕೆ.....)

**ಅಧ್ಯಕ್ಷರ ಲೇಖನಿಯಿಂದ....**

ಕೆ. ಬಾಲಕೃಷ್ಣ ಭಟ್, Ex. MLC, ಅಧ್ಯಕ್ಷರು, ಶಿಕ್ಷಕ ಸಂಘ

# ಕಿಮ್ಮನೆಯವರಿಗೆ ಸುಮ್ಮನೆ ಒಂದು ಪತ್ರ

ಮಾನ್ಯರೇ,

ತಾವು ಕರ್ನಾಟಕದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾಗಿ ಆರುತಿಂಗಳು ಸಂದಿದೆ ಅಭಿನಂದನೆ. ಮೊದಲ ಬಾರಿಗೆ, ಶಿಕ್ಷಣ ಸಚಿವರಾಗಿ ನಿಮ್ಮನ್ನು ಮಾನ್ಯಮುಖ್ಯಮಂತ್ರಿಯವರು ನೇಮಿಸಿದಾಗ ಶಿಕ್ಷಕರಲ್ಲಿ ಹಾಗೂ ಶಿಕ್ಷಣಾಸಕ್ತರಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಅದೇಂದರೆ ಸನ್ಮಾನ್ಯ ಕಿಮ್ಮನೆ ರತ್ನಾಕರರವರು ಒಬ್ಬ ಸಭ್ಯ ರಾಜಕಾರಣಿಯೆಂದೇ ಹೆಸರು ಮಾಡಿದ್ದವರು. ಶಿಕ್ಷಣದಂತಹ ಅತ್ಯಂತ ಪ್ರಮುಖ ಇಲಾಖೆಯ ನೇತೃತ್ವ ವಹಿಸಲು ನಿಮಗಿಂತ ಹೆಚ್ಚು ಸಮರ್ಥರು ಇಂದಿನ ಸರಕಾರದಲ್ಲಿ ಇನ್ನಾರೂ ಇಲ್ಲವೆಂದೋ ಅಥವಾ ಸನ್ಮಾನ್ಯ ರಾಮಲಿಂಗಾರೆಡ್ಡಿ, ಬಿ.ಕೆ ಚಂದ್ರಶೇಖರಂತಹವರನ್ನೂ ನೋಡಿದ ನಂತರ ಒಂದು ಹೊಸ ಮುಖವನ್ನು ಮುಂದಿಟ್ಟು ನೋಡೋಣವೆಂತಲೋ ತಮ್ಮನ್ನು ಮಾನ್ಯ ಸಿದ್ಧರಾಮಯ್ಯನವರು ವಿದ್ಯಾಭ್ಯಾಸ ಮಂತ್ರಿಯಾಗಿ ನೇಮಿಸಿರಲಿಕ್ಕೆ ಸಾಕು. ಏನಿದ್ದರೂ ಮಂತ್ರಿಯಾದ ನಂತರದ ಒಂದೊಂದು ದಿನವೂ ತಾವು ಏನು ಹೇಳಿದಿರಿ? ಏನು ಮಾಡಿದಿರಿ? ಎಂಬುದನ್ನು ಜನತೆ ಗಮನಿಸುತ್ತ ಬಂದಿದೆ.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಎಂದಿನಂತೆ ಹೊಸದಾಗಿ ಬಂದ ಸರಕಾರದ ಶಿಕ್ಷಣ ಮಂತ್ರಿಯನ್ನು ಭೇಟಿಯಾಗಿ, ಅಭಿನಂದನೆ ಸಲ್ಲಿಸಿ ರಾಜ್ಯದ ಇಂದಿನ ಶೈಕ್ಷಣಿಕ ಚಿತ್ರವನ್ನು ತಮ್ಮೆದುರು ಬಿಚ್ಚಿಟ್ಟು ಶಿಕ್ಷಕರ ನೇಮಕಾತಿ, ಹೆಚ್ಚುವರಿ ಶಿಕ್ಷಕರು, ಭಾಷಾನೀತಿ, ಮಾತೃಭಾಷಾ ಶಿಕ್ಷಣ, ಪಠ್ಯ ಪುಸ್ತಕಗಳು ಮುಂತಾದ ಗಂಭೀರ ವಿಷಯಗಳ ಬಗ್ಗೆ ತಮ್ಮ ಗಮನ ಸೆಳೆಯಿತು. ಶಿಕ್ಷಕ ಸಂಘದ ನಮ್ಮ ನಿಯೋಗಕ್ಕೆ ಸ್ವಲ್ಪ ಭರವಸೆ ಬರುವ ರೀತಿಯ ಮಾತುಗಳನ್ನು ತಾವು ಹೇಳಿದ್ದಿರಿ. ತಾನಿನ್ನೂ ಸಮಸ್ಯೆಗಳ ಗಂಭೀರತೆಯನ್ನು ಅಧ್ಯಯನ ಮಾಡುತ್ತಿದ್ದೇನೆ. ಏನಿದ್ದರೂ ತಾನು ಮುಕ್ತ ಮನಸ್ಸು ಹೊಂದಿದವನಿದ್ದೇನೆ. ತಮ್ಮ ಯಾವುದೇ ಸಲಹೆ, ಅಭಿಪ್ರಾಯಗಳಿಗೆ ತನ್ನ ಸ್ವಾಗತವಿದೆ. ಎಂದು ಹೇಳಿದ್ದಿರಿ. ಅದಾದ ಕೆಲವೇ ದಿನಗಳಲ್ಲಿ ತಾನೊಂದು ಸಲಹಾ ಸಮಿತಿಯನ್ನು ರಚಿಸುವವನಿದ್ದೇನೆ. ಡಾ. ಯು.ಆರ್. ಅನಂತಮೂರ್ತಿ ಮುಂತಾದವರ ಸಲಹೆಯನ್ನು ಎದುರು ನೋಡುತ್ತಿದ್ದೇನೆ. ಎಂದೂ ಹೇಳಿಕೆ ನೀಡಿದ್ದಿರಿ. ತಮ್ಮ ಈ ಹೇಳಿಕೆಯನ್ನು ಓದಿದಾಗ 'ವಿನಾಯಕಂ ಪ್ರಕುರ್ವಾಣೋ ರಚಯಾಮಾಸ ವಾನರಂ' ( ಗಣೇಶನ ಮೂರ್ತಿ ಕೆತ್ತಲು ಹೋಗಿ ಕೋತಿಯ ಮೂರ್ತಿ ರಚಿತವಾಯಿತು) ಎಂಬ ಮಾತು ನೆನಪಿಗೆ ಬರುತ್ತಿದೆ. ತಾವೂ ಮಾಡ ಹೊರಟಿರುವುದು ಒಂದಾದರೆ ಆಗುತ್ತಿರುವುದು ಇನ್ನೊಂದು ಎಂಬಂತೆ ನಡೆದಿದೆಯೇ? ಎಂಬ ಆತಂಕ ಶಿಕ್ಷಕರಲ್ಲಿ ಬಂದಿದೆ.

ತಾವು ಕರ್ನಾಟಕದಲ್ಲಿ ತರಲಿರುವ ಶಿಕ್ಷಣ ನೀತಿ, ಮಹಾತ್ಮಾ ಗಾಂಧಿಜೀ, ಡಾ. ಅಂಬೇಡ್ಕರ್, ಡಾ. ಲೋಹಿಯಾ ಮುಂತಾದ ಮಹನೀಯರು ಬಯಸಿದ್ದ ಶಿಕ್ಷಣವೆಂದಾದಲ್ಲಿ ತಮಗೆ ಯು.ಆರ್. ಅನಂತ ಮೂರ್ತಿಯಂತಹವರ ಸ್ವಯಂಪ್ರೇರಿತ ಸಲಹೆ ಸ್ವೀಕಾರಾರ್ಹವಾಗಬಾರದು. ಜ್ಞಾನಪೀಠದಂತಹ ಗೌರವಾರ್ಹ ಸ್ಥಾನಕ್ಕೆ ಅಪಚಾರವೆಸಗುತ್ತಿರುವವರಿಂದ ತಾವು ಎಷ್ಟು ಅಂತರ ಇಟ್ಟುಕೊಂಡಿರೋ ಅಷ್ಟು ಒಳ್ಳೆಯದು ತಮಗೂ, ನಮ್ಮ ಕರ್ನಾಟಕ ರಾಜ್ಯಕ್ಕೂ.

ತಮಗೆ ಮತ್ತು ಸದರಿವ್ಯಕ್ತಿಗೆ ಸಮಾಜವಾದ ಮಾತ್ರ ಸಮಾನ ಹಿನ್ನೆಲೆಯ ವಿಷಯವಾಗಿದ್ದರೂ ಕೂಡ, ಅವರಿಗೆ ಅದು ಜೀವನದ ದೃಷ್ಟಿಯಾಗುವುದರ ಬದಲಿಗೆ ಜೀವನದ ದಾರಿಯಾಗಿರುವಂತಿದೆ. ಅವರಿಗೆ ಅಂಟಿಕೊಂಡಿರುವ ಹೊಲಸು ಅಥವಾ ಅವರು ತಾವೇ ಬಯಸಿ ಅಂಟಿಸಿಕೊಂಡಿರುವ ಗಲೀಜು, ತಮ್ಮಂತಹ ಪ್ರಾಮಾಣಿಕ ಸೋಶಿಯಲಿಸ್ಟರಿಗೆ ಮೆತ್ತಿಕೊಳ್ಳಬಾರದು.

ಒಬ್ಬ ವ್ಯಕ್ತಿಯ ಬಗ್ಗೆ ತಿಳಿಯಬೇಕಾದರೆ ಅವನ ಸ್ನೇಹಿತರು ಎಂಥವರು ಎಂದು ತಿಳಿಯಬೇಕಂತೆ. ಹಾಗೆಯೇ ಒಬ್ಬ ರಾಜನ ಬಗ್ಗೆ ಅರಿಯುವುದಾದರೆ, ಅವನ ಮಂತ್ರಿಗಳು ಯಾರು ಎಂಬುದನ್ನು ತಿಳಿಯಬೇಕಾಗುತ್ತದೆ. ಇಂದಿನ ದಿನಮಾನದಲ್ಲಿ ಒಬ್ಬ ಮಂತ್ರಿಯ ಕಾರ್ಯನಿರ್ವಹಣೆಯ ಬಗ್ಗೆ ಹೇಳಬೇಕಾದರೆ, ಅವನು ಇಟ್ಟುಕೊಂಡಿರುವ ಸಲಹಾ ಸಮಿತಿ ಎಂತಹದು ಎಂದು ತಿಳಿಯಬೇಕಾಗುತ್ತದೆ. 'ಸಗಣಿಯ ಜತೆ ಸ್ನೇಹಕ್ಕಿಂತ ಶ್ರೀಗಂಧದ ಜತೆ ಗುದ್ದಾಟ ಲೇಸು' ಎಂಬ ಗಾದೆ ಮಾತಿನಲ್ಲಿರುವ ಅನುಭವದಿಂದ ನಾವು– ನೀವು ಪಾಠ ಕಲಿಯಬೇಕಾಗಿದೆ. ಪ್ರಾಮಾಣಿಕ ಶುದ್ಧ ಮತ್ತು

(9ನೇ ಪುಟಕ್ಕೆ.....)

# ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ (CCE)

ಕಳೆದ ಸಂಚಿಕೆಯಿಂದ...

■ ವಿ. ರಾಜ, ಅಧ್ಯಕ್ಷರು ಬೆಂಗಳೂರು ದಕ್ಷಿಣ ಜಿಲ್ಲೆ, ಕರಾಮಾಶಿಶ

### ಶಿಕ್ಷಕರ ಕುರಿತು ವಿದ್ಯಾರ್ಥಿಗಿರುವ ಮನೋಧೋರಣೆಯ ತಪಶೀಲು ಪಟ್ಟಿ

1. ವಿದ್ಯಾರ್ಥಿಯು ಶಿಕ್ಷಕರಿಗೆ ತರಗತಿಯ ಒಳಗೆ ಮತ್ತು ಹೊರಗೆ ಗೌರವ ಹಾಗೂ ನಮ್ರತೆಯನು ತೋರಸುತ್ತಾನೆಯೇ? / ತೋರಿಸುತ್ತಾಳೆಯೇ ?
2. ತನ್ನ ಕಲಿಕೆಯ ಕುರಿತು ಧನಾತ್ಮಕವಾದ ಮನೋಭಾವ ವನ್ನು ತೋರಿಸುತ್ತಾರೆಯೇ ?
3. ಶಿಕ್ಷಕರ ಸಲಹೆಗಳನ್ನು ಧನಾತ್ಮಕವಾಗಿ ಸ್ವೀಕರಿಸು ತ್ತಾರೆಯೇ?
4. ತನ್ನ ವಿಚಾರಗಳನ್ನು ಶಿಕ್ಷಕರೊಡನೆ ಸಮಾಲೋಚನೆ ಮಾಡುತ್ತಾರೆಯೆ ?
5. ಶಿಕ್ಷಕರ ಬಗ್ಗೆ ಇರುವ ಪ್ರೀತಿ, ಆತ್ಮೀಯತೆಯನ್ನು ವ್ಯಕ್ತಪಡಿಸುತ್ತಾರೆಯೇ ?

### ತನ್ನ ಸಹಪಾಠಿಗಳ ಬಗ್ಗೆ ವಿದ್ಯಾರ್ಥಿಗಿರುವ ಮನೋಧೋರಣೆಯ ತಪಶೀಲು ಪಟ್ಟಿ

1. ತನ್ನ ಸಹಪಾಠಿಗಳೊಡನೆ ಪರಸ್ಪರ ಚರ್ಚಿಸುತ್ತಾರೆಯೇ ?
2. ಸಹಪಾಠಿಗಳೊಡನೆ ಅಭಿಪ್ರಾಯ ಭಿನ್ನತೆಯನ್ನು ಗೌರವಿಸುತ್ತಾರೆಯೇ ?
3. ಗುಂಪಿನಲ್ಲಿರುವಾಗ ಇತರರ ವಿಚಾರ ಹಾಗೂ ಅಭಿಪ್ರಾಯಗಳಿಗೆ ಮನ್ನಣೆ ನೀಡುತ್ತಾರೆಯೇ ?
4. ಗುಂಪಿನ್ನಲಿರುವಾಗ ಇತರರು ತನ್ನ ವಿಚಾರಗಳನ್ನು ವಿಮರ್ಶಿಸಿದಾಗ ತಾಳ್ಮೆಯಿಂದ ಕೇಳುವ ವ್ಯವಧಾನ ವಿದೆಯೇ ?
5. ಇತರರ ಸಾಮರ್ಥ್ಯ, ಧಾರ್ಮಿಕ ನಂಬಿಕೆ, ಸಂಸ್ಕೃತಿ, ಸಂಪ್ರದಾಯಗಳನ್ನು ಗೌರವಿಸುತ್ತಾರೆಯೆ ?

### ಶಾಲಾ ಕಾರ್ಯಕ್ರಮಗಳ ಬಗ್ಗೆ ಇರುವ ಮನೋಧೋರಣೆಯ ತಪಶೀಲು ಪಟ್ಟಿ

1. ಶಾಲಾ ಕಾರ್ಯಕ್ರಮಗಳಿಗೆ ನಿಯಮಿತವಾಗಿ ಸಮಯಕ್ಕೆ ಸರಿಯಾಗಿ ಹಾಜರಾಗುತ್ತಾರೆಯೇ ?
2. ಕಾರ್ಯಕ್ರಮಗಳಲ್ಲಿ ಸ್ವಯಂಸೇವಕರಾಗಿ ಭಾಗವಹಿಸು ತ್ತಾರೆಯೇ ?
3. ತನಗೆ ವಹಿಸಿದ ಕರ್ತವ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಾರೆಯೇ ?
4. ನಾಯಕತ್ವ / ಮುಖಂಡತ್ವ ಕೌಶಲ್ಯವನ್ನು ಪ್ರದರ್ಶಿಸುತ್ತಾರೆಯೇ ?
5. ಶಾಲಾ ಕಾರ್ಯಕ್ರಮಗಳಲ್ಲಿ ಸಕ್ರಿಯರಾಗಿ ಭಾಗವಹಿಸುವಂತೆ

### ಪರಿಸರ ಸ್ನೇಹಿ ಧೋರಣೆಯ ತಪಶೀಲು ಪಟ್ಟಿ

1. ವಿದ್ಯಾರ್ಥಿಗಳು ಶಾಲಾ ಆಸ್ತಿಯನ್ನು ರಕ್ಷಿಸುತ್ತಾರೆಯೇ?
2. ಗಿಡಗಳನ್ನು ಹೆಚ್ಚು ಪಾಲನೆ ಮಾಡುತ್ತಾರೆಯೆ ?
3. ಶಾಲಾ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುತ್ತಾರೆಯೇ?
4. ಸ್ವಚ್ಛತಾ ನಿಯಮಗಳನ್ನು ಪಾಲಿಸುತ್ತಾರೆಯೆ ?
5. ಪರಿಸರದ ಕುರಿತಾಗಿ ಶಾಲೆಯಲ್ಲಿ ಏರ್ಪಡಿಸುವ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆಯೆ ?

### ಮೌಲ್ಯಗಳ ತಪಶೀಲು ಪಟ್ಟಿ

1. ನಿಯಮಗಳನ್ನು ಅರಿತು ಅನುಸರಿಸುತ್ತಾರೆಯೇ ?
2. ಪ್ರಾಮಾಣಿಕತೆ, ನೈತಿಕತೆ ಮತ್ತು ಭಾವೈಕ್ಯತೆಗಳನ್ನು ಪ್ರದರ್ಶಿಸುತ್ತಾರೆಯೆ ?
3. ಇತರರೊಡನೆ ನಯ–ವಿನಯದಿಂದ ಮಾತನಾಡು ತ್ತಾರೆಯೇ ?
4. ದಯೆ, ಸಹಕಾರ ಮನೋಭಾವ ಜವಾಬ್ದಾರಿಗಳನ್ನು ಹೊಂದಿದ್ದಾರೆಯೇ ?
5. ನುಡಿದಂತೆ ನಡೆಯುವ ವಚನ ಬದ್ಧತೆಯನ್ನು ತೋರಿಸುತ್ತಾರೆಯೇ ?
6. ಕಾರ್ಯದಲ್ಲಿ ದಕ್ಷತೆಯನ್ನು ಹೊಂದಿದ್ದಾರೆಯೇ ?
7. ಇತರರೊಡನೆ ಸ್ನೇಹದಿಂದ, ಹಿರಿಯರೊಡನೆ ಗೌರವದಿಂದ ವರ್ತಿಸುತ್ತಾರೆಯೇ ?
8. ಇತರರಲ್ಲಿರುವ ಸಂಸ್ಕೃತಿ, ಅಭಿಪ್ರಾಯ, ನಂಬಿಕೆ, ಸಾಮರ್ಥ್ಯ, ಇತರ ಲಿಂಗ, ಮುಂತಾದ ವೈವಿಧ್ಯತೆಗಳನ್ನು ಗೌರವಿಸುತ್ತಾರೆಯೆ ?
9. ನಾಯಕತ್ವ / ಮುಖಂಡತ್ವವನ್ನು ಪ್ರದರ್ಶಿಸುತ್ತಾರೆಯೇ?
10. ದೇಶಾಭಿಮಾನ, ಭಾಷಾಭಿಮಾನ, ಸ್ವಾಭಿಮಾನ ಮುಂತಾದವುಗಳನ್ನು ಪ್ರದರ್ಶಿಸುತ್ತಾರೆಯೇ ?

(7ನೇ ಪುಟಕ್ಕೆ.....)

5ನೇ ಪುಟದಿಂದ...

## ಮೌಲ್ಯಮಾಪನ

ಈ ಮೇಲಿನ ಎಲ್ಲಾ ತಪಶೀಲು ಪಟ್ಟಿಗಳಲ್ಲಿರುವ ಅಂಕಗಳನ್ನು ಪ್ರತೀ ಸೆಮಿಸ್ಟರ್‌ನಲ್ಲಿ 3 ಬಾರಿ ಪರಿಶೀಲಿಸಬೇಕು. ಉದಾಹರಣೆ :

| ಕ್ರ.ಸಂ. | ಹೇಳಿಕೆ | ಮೊದಲನೇ ಸೆಮಿಸ್ಟರ್ | | | ಎರಡನೇ ಸೆಮಿಸ್ಟರ್ | | |
|---|---|---|---|---|---|---|---|
| | | 1ನೇ ಬಾರಿ | 2ನೇ ಬಾರಿ | 3ನೇ ಬಾರಿ | 1ನೇ ಬಾರಿ | 2ನೇ ಬಾರಿ | 3ನೇ ಬಾರಿ |
| 1 | ವಿದ್ಯಾರ್ಥಿಯಲ್ಲಿ ನಾಯಕತ್ವವಿದೆ | x | x | ✓ | x | ✓ | ✓ |

### ಶಿಕ್ಷಕರ ವೈಯಕ್ತಿಕ ದಾಖಲೆಯ ನಮೂನೆ

| ಕ್ರ ಸಂ. | ವಿದ್ಯಾರ್ಥಿ ಹೆಸರು | ಮೊದಲನೆಯ ಸೆಮಿಸ್ಟರ್ / ಅರ್ಧ ವಾರ್ಷಿಕ | | | | | | | | | | | | | | |
|---|---|---|---|---|---|---|---|---|---|---|---|---|---|---|---|---|
| | | ಘಟಕ 1 | | | | | ಘಟಕ 2 | | | | | ಘಟಕ 3 | | | | |
| | | 1 | 2 | 3 | 4 | 5 | 1 | 2 | 3 | 4 | 5 | 1 | 2 | 3 | 4 | 5 |
| 1 | ಕೃಷ್ಣ | ✓ | x | ✓ | ✓ | ✓ | x | ✓ | ✓ | ✓ | x | ✓ | ✓ | ✓ | ✓ | ✓ |
| 2 | | | | | | | | | | | | | | | | |
| 3 | | | | | | | | | | | | | | | | |
| 4 | | | | | | | | | | | | | | | | |
| 5 | | | | | | | | | | | | | | | | |

### ಮೊದಲನೆಯ ಸೆಮಿಸ್ಟರ್ / ಅರ್ಧ ವಾರ್ಷಿಕ
### ರೂಪಣಾತ್ಮಕ ಮೌಲ್ಯಮಾಪನ

| ಕ್ರ ಸಂ. | ವಿದ್ಯಾರ್ಥಿ ಹೆಸರು | ಘಟಕ 1 | ಘಟಕ 2 | ಘಟಕ 3 | ಘಟಕ 4 | ಘಟಕ 5 | ಘಟಕ 6 | ಘಟಕ 7 | ಘಟಕ 8 | ಘಟಕ 9 | ಘಟಕ 10 | ಘಟಕ 11 | ಘಟಕ 12 | ಘಟಕ 13 |
|---|---|---|---|---|---|---|---|---|---|---|---|---|---|---|
| 1 | | | | | | | | | | | | | | |
| 2 | | | | | | | | | | | | | | |
| 3 | | | | | | | | | | | | | | |
| 4 | | | | | | | | | | | | | | |
| 5 | | | | | | | | | | | | | | |

ಪ್ರತಿಯೊಬ್ಬ ವಿದ್ಯಾರ್ಥಿಯ ಮೌಲ್ಯಮಾಪನವನ್ನು ಘಟಕವಾರು ಮಾಡಬೇಕು. ಪ್ರತಿಯೊಂದು ಘಟಕದಲ್ಲಿ ವಿದ್ಯಾರ್ಥಿಯ ಒಟ್ಟು ಅಂಕಗಳಿಗೆ ಎಷ್ಟು ಸಾಮರ್ಥ್ಯ ಗಳಿಸಿದ್ದಾರೆ ಎಂದು ಕ್ರೋಢೀಕರಿಸಿ ರೂಪಣಾತ್ಮಕ ಮೌಲ್ಯಮಾಪನದಲ್ಲಿ ದಾಖಲಿಸಬೇಕು.

ಪ್ರಥಮ ಸೆಮಿಸ್ಟರ್‌ನಲ್ಲಿ 2 ರೂಪಣಾತ್ಮಕ ಮೌಲ್ಯಮಾಪನ ಹಾಗೂ ದ್ವಿತೀಯ ಸೆಮಿಸ್ಟರ್‌ನಲ್ಲಿ 2 ರೂಪಣಾತ್ಮಕ ಮೌಲ್ಯಮಾಪನಗಳನ್ನು ದಾಖಲಿಸಬೇಕು. ಪ್ರತೀ ಸೆಮಿಸ್ಟರ್‌ನ ಅಂತ್ಯದಲ್ಲಿ ತಲಾ 30% ಸಂಕಲನಾತ್ಮಕ ಮೌಲ್ಯಮಾಪನವನ್ನು ದಾಖಲಿಸಬೇಕು.

ಪ್ರಥಮ ಭಾಷೆ, ದ್ವಿತೀಯ ಭಾಷೆ, ತೃತೀಯ ಭಾಷೆ, ಗಣಿತ, ವಿಜ್ಞಾನ, ಸಮಾಜ ವಇಜ್ಞಾನ, ಡಿಸಿ.ಟಿ.(ಇತರೆ), ದೈಹಿಕ ಆರೋಗ್ಯ ಶಿಕ್ಷಣ, ಕಾರ್ಯಾನುಭವ, ಕಲಾ ಶಿಕ್ಷಣ ಈ ಎಲ್ಲಾ ವಿಷಯಗಳಿಗೆ ಇಡೀ ವರ್ಷದಲ್ಲಿ 4 ರೂಪಣಾತ್ಮಕ ಹಾಗೂ 2 ಸಂಕಲನಾತ್ಮಕ ಮೌಲ್ಯ ಮಾಪನಗಳನ್ನು ದಾಖಲಿಸಬೇಕು.

(9 ನೇ ಪುಟಕ್ಕೆ.....)

ಸುತ್ತೋಲೆ

# ಕರ್ನಾಟಕ ಸರ್ಕಾರದ ನಡಾವಳಿಗಳು

**ವಿಷಯ: ಸರ್ಕಾರಿ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಸೆಪ್ಟೆಂಬರ್ 2013ರಿಂದ ಮಾರ್ಚ್ 2014ರವರೆಗೆ ನಿವೃತ್ತಿಯಾಗುತ್ತಿರುವ ಶಿಕ್ಷಕರು, ಉಪನ್ಯಾಸಕರುಗಳನ್ನು ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಮುಂದುವರೆಸುವ ಬಗ್ಗೆ.**

ಸರ್ಕಾರಿ ಆದೇಶ ಸಂಖ್ಯೆ : ಇಡಿ 64 ಎಸ್.ಟಿ.ಬಿ 2013, ಬೆಂಗಳೂರು, ದಿನಾಂಕ :02-09-2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಅಂದರೆ ಪ್ರಸ್ತುತ ಸಾಲಿಗೆ ಅನ್ವಯಿಸುವಂತೆ ಸೆಪ್ಟಂಬರ್ 1ನೇ ತಾರೀಖಿನಿಂದ ಜಾರಿಗೆ ಬರುವಂತೆ ಫೆಬ್ರವರಿ 2014ರ ಅಂತ್ಯದವರೆಗೆ ನಿವೃತ್ತರಾಗುವ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಕರು ಹಾಗೂ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರನ್ನು ಕೆಳಕಂಡ ಷರತ್ತುಗಳ ಆಧಾರದ ಮೇಲೆ ಮುಂದುವರೆಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಲಾಗಿದೆ.

ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 715 ಸೇ-1/13, ದಿ:23.08.2013ರಲ್ಲಿ ನೀಡಿರುವ ಸಹಮತಿಯನ್ವಯ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಬಿ.ಪಟಗಾರ್, ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಸಾಮಾನ್ಯ)

---

# ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ

ಶಿಕ್ಷಕಸದನದಲ್ಲಿ ನಡೆದ ಶಿಕ್ಷಕರ ದಿನಾಚರಣೆ 2013 ಕಾರ್ಯಕ್ರಮದಲ್ಲಿ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು. ಅಲ್ಲಿ ಬೆಂಗಳೂರು ಉತ್ತರಜಿಲ್ಲೆಯಿಂದ ಶ್ರೀ ನಾರಾಯಣ ಅನಂತ ಭಟ್ಟ ಇವರು ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆಯಾಗಿ ಪುರಸ್ಕೃತರಾದರು. 1994 ರಲ್ಲಿ ಸರ್ಕಾರಿ ಪ್ರೌಢಶಾಲೆಯಲ್ಲಿ ವೃತ್ತಿಯನ್ನು ಆರಂಭಿಸಿದ ಇವರು ಪ್ರಸ್ತುತ ಬೆಂಗಳೂರು ಉತ್ತರಜಿಲ್ಲೆಯ ಸರ್ಕಾರಿ ಪದವಿಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗ, ಪೀಣ್ಯ, ಬೆಂಗಳೂರು ಉತ್ತರಜಿಲ್ಲೆ, ಬೆಂಗಳೂರು-560 058 ಇಲ್ಲಿ ಸಂಸ್ಕೃತ ಭಾಷಾ ಶಿಕ್ಷಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಸಂಸ್ಕೃತ ಭಾಷೆಯಲ್ಲಿ ವಿದ್ವತ್ ಪದವಿ, ಸ್ನಾತಕೋತ್ತರ ಪದವಿ ಹಾಗೂ ಬಿ.ಎಡ್. ಶಿಕ್ಷಣವನ್ನು ಪಡೆದ ಶ್ರೀಯುತರು ಸಾವಿರಾರು ವಿದ್ಯಾರ್ಥಿಗಳಿಗೆ ಸಂಸ್ಕೃತಭಾಷೆಯ ಹಿರಿಮೆಗರಿಮೆಗಳನ್ನು ಬೋಧಿಸುತ್ತಾ ಸಂಸ್ಕೃತಭಾಷೆಯ ಕಲಿಕೆಯಲ್ಲಿ ಮಕ್ಕಳನ್ನು ತೊಡಗಿಸುತ್ತಾ ಬಂದಿರುತ್ತಾರೆ. ಶ್ರೀಮಂತಭಾಷೆಯಾದ ಸಂಸ್ಕೃತವನ್ನು ಸರಳವಾಗಿ ಬೋಧಿಸಲು ವಿವಿಧ ನೂತನ ಪ್ರಯೋಗಗಳನ್ನು ಅನ್ವೇಷಣೆ ಮಾಡಿ, ಆ ಮೂಲಕ ಸುಲಭವಾಗಿ ಸಂಸ್ಕೃತವನ್ನು ಬೋಧಿಸುತ್ತಾ, ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾಗಿರುತ್ತಾರೆ. ಬೋಧನೆಯೊಂದಿಗೆ ಭಾಷಾಸ್ಪರ್ಧೆಗಳ ಆಯೋಜನೆ, ಸರಳಸಂಸ್ಕೃತ ಪರೀಕ್ಷೆಗಳ ಆಯೋಜನೆ, ವಿವಿಧ ಶಿಬಿರಗಳ ಆಯೋಜನೆ ಹೀಗೆ ನೂರಾರು ಅವಕಾಶಗಳನ್ನು ಮಕ್ಕಳಿಗೆ ಕಲ್ಪಿಸಿಕೊಡುವ ಮೂಲಕ ಸಂಸ್ಕೃತಕಲಿಕಯಲ್ಲಿ ಅಭಿರುಚಿಯುಂಟಾಗುವಂತೆ ಮಾಡುತ್ತಿರುವ ಇವರ ಪ್ರಯತ್ನ ಪ್ರಶಂಸನೀಯವಾದುದು.

ಹೀಗೆ ಶ್ರೀಯುತರು ಶಿಕ್ಷಣಕ್ಷೇತ್ರಕ್ಕೆ ಸಲ್ಲಿಸುತ್ತಿರುವ ಗಣನೀಯ ಸೇವೆಯನ್ನು ಗೌರವಿಸಿ ಈ ವರ್ಷದ ಶಿಕ್ಷಕ ದಿನಾಚರಣೆಯ ಸಂದರ್ಭದಲ್ಲಿ ಡಾ. ಸಿ.ಎನ್. ಅಶ್ವಥ್‌ನಾರಾಯಣ - ಮಾನ್ಯ ಶಾಸಕರು, ಮಲ್ಲೇಶ್ವರಮ್, ಶ್ರೀ ಎಸ್.ಆರ್.ವಿಶ್ವನಾಥ್-ಮಾನ್ಯ ಶಾಸಕರು, ಯಲಹಂಕ, ಶ್ರೀಪುಟ್ಟಣ್ಣ - ಮಾನ್ಯ ಶಾಸಕರು, ವಿಧಾನಪರಿಷತ್, ಬೆಂಗಳೂರು, ಶ್ರೀಮತಿ ಜಿನ್ನುಬಾಯಿ ನಾಗರಾಜ್-ಮಾನ್ಯ ಉಪಾಧ್ಯಕ್ಷರು ಜಿಲ್ಲಾಪಂಚಾಯತ್, ಬೆಂಗಳೂರು, ಶ್ರೀ ಕೆ.ಎಮ್. ಮಾರೇಗೌಡ -ಜಿಲ್ಲಾಪಂಚಾಯತ್ ಸದಸ್ಯರು, ಬೆಂಗಳೂರು, ಶ್ರೀ ವೆಂಕಟೇಶ್- ಮಾನ್ಯ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರಜಿಲ್ಲೆ, ವಿವಿಧ ಶಿಕ್ಷಣಾಧಿಕಾರಿಗಳು ಮತ್ತು ಜಿಲ್ಲೆಯ ಎಲ್ಲಾ ಶಿಕ್ಷಣಾಧಿಕಾರಿಗಳು ಹಾಗೂ ವಿವಿಧ ಶಿಕ್ಷಕ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರ ಸಮ್ಮುಖದಲ್ಲಿ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯುನ್ನು ನೀಡಿ ಸಮ್ಮಾನಿಸಲಾಯಿತು.

●

4ನೇ ಪುಟದಿಂದ...

**ರಾಜ್ಯಕಾರ್ಯಕಾರಿಣಿ**

ಮಹಾಸಂಘವು ಈ ಬಗ್ಗೆ ಚಿಂತನೆ ನಡೆಸಿ ಕೇಂದ್ರ ಮಾನವ ಸಂಪನ್ಮೂಲ ಸಚಿವಾಯಲಕ್ಕೆ ಒಂದು ಮನವಿಯನ್ನು ಸಲ್ಲಿಸಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಸಹ ಒಂದನೇ ತರಗತಿಯಿಂದ ಹನ್ನೆರಡನೇ ತರಗತಿಯವರೆಗೆ ಜೀವನ ಮೌಲ್ಯಗಳಾದ ಪ್ರಾಮಾಣಿಕತೆ, ಸಹಬಾಳ್ವೆ, ಸಾಮರಸ್ಯ ಮಾನವೀಯತೆ, ಚಾರಿತ್ರ್ಯಸಂಪನ್ನತೆ, ಸೃಜನಶೀಲತೆ ಮುಂತಾದ ಗುಣಗಳನ್ನು ಬೆಳೆಸುವ ಪಠ್ಯ ಪುಸ್ತಕಗಳನ್ನು ತಯಾರಿಸಿ 2014–15ರ ಶೈಕ್ಷಣಿಕ ವರ್ಷದಿಂದ ಕಡ್ಡಾಯವಾಗಿ ಜಾರಿಗೊಳಿಸಬೇಕೆಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಸರ್ಕಾರವನ್ನು ಒತ್ತಾಯಿಸುತ್ತಿದೆ. ●

7ನೇ ಪುಟದಿಂದ...

**ಮೌಲ್ಯಮಾಪನ**

ಭಾಗ 2 ರಲ್ಲಿ ಭಾವನಾತ್ಮಕ, ಸಾಮಾಜಿಕ, ವೈಜ್ಞಾನಿಕ, ಸಂಘಟನೆ, ಸೌಂದರ್ಯ ಮತ್ತು ಲಲಿತಕಲೆಗಳು, ಸೃಜನಶೀಲತೆ, ಶಿಕ್ಷಕರ ಬಗ್ಗೆ, ಸಹಪಾಠಿಗಳ ಬಗ್ಗೆ, ಶಾಲಾ ಕಾರ್ಯಕ್ರಮಗಳ ಬಗ್ಗೆ, ಪರಿಸರದ ಬಗ್ಗೆ, ಮೌಲ್ಯಗಳ ಬಗ್ಗೆ ವಿದ್ಯಾರ್ಥಿಯಲ್ಲಿರುವ ಮನೋಧೋರಣೆಗಳ ಬಗ್ಗೆ ತಪಶೀಲುಗಳ ಮೂಲಕ ಪತ್ತೆ ಹೆಚ್ಚಿ ವರ್ಷದಲ್ಲಿ ಎರಡು ಬಾರಿ ಅಂದರೆ ಪ್ರತೀ ಸೆಮಿಸ್ಟರ್‌ನ ಅಂತ್ಯದಲ್ಲಿ ದಾಖಲಿಸಬೇಕು. ಹೆಚ್ಚಿನ ಮಾಹಿತಿಗೆ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯು ಹೊರಡಿಸಿರುವ ಸಾಧನ, ಸಾಧನ ಪುಷ್ಟಿ ಮುಂತಾದ ಸಾಹಿತ್ಯಗಳನ್ನು ಅವಲೋಕಿಸಬಹುದಾಗಿದೆ. **ಮುಕ್ತಾಯ**

## ಸಲೀಸಾಗಿ ನುಂಗಿ ನೀರು ಕುಡಿದವರು

ಒಂದೂರಿನಲ್ಲಿ ಒಬ್ಬ ಸುಪ್ರಸಿದ್ಧ ಜಾದೂಗಾರ ಗ್ರಾಮದ ಬೀದಿ ಬೀದಿಯಲ್ಲಿ ಸಂಚರಿಸುತ್ತಾ 'ನಾನು ಪ್ರಸಿದ್ಧ ಜಾದೂಗಾರ'. ಗಾಜನ್ನು ತಿನ್ನಬಲ್ಲೆ ಜೀವಂತ ಚೇಳು ಹಾವುಗಳನ್ನು ತಿನ್ನುತ್ತೇನೆ. ಬಂದು ನೋಡಿರಿ, ಆನಂದ ಪಡೆಯಿರಿ ಎಂದು ಸಾರುತ್ತಾ ಹೊರಟನು. ತನ್ನ ಮನೆಯ ಮುಂದೆ ನಿಂತು ಈ ಜಾದೂಗಾರನ ಮಾತುಗಳನ್ನು ಆಲಿಸುತ್ತಿದ್ದ ಒಬ್ಬ ಮುದುಕಿ ಜಾದೂಗಾರನನ್ನ ಹತ್ತಿರ ಕರೆದು ನಮ್ಮಲ್ಲಿ ಕೊಟ್ಟ ಸಾಲವನ್ನು ನುಂಗುವವ ರಿದ್ದಾರೆ, ಆಸ್ತಿ ನುಂಗುವವರಿದ್ದಾರೆ, ರಸ್ತೆ ನುಂಗುವವರಿದ್ದಾರೆ, ಸೈಟುಗಳನ್ನು ನುಂಗುವವರು ಇದ್ದಾರೆ, ಅದಿರನ್ನ ನುಂಗುವವರು, ಕಲ್ಲಿದ್ದಲನ್ನು ನುಂಗುವವರೂ ಇದ್ದಾರೆ. ಹೀಗೆ ನುಂಗಬಾರದ್ದನ್ನೆಲ್ಲ ನುಂಗುವ ಮಹಾನ್ ಜಾದೂಗಾರ ರಿರುವಾಗ ನಿನ್ನದ್ಯಾವ ಮಹಾ ಜಾದೂ ಎಂದಳು. ಜಾದೂಗಾರ ಮರುಮಾತಾಡದೆ ನಡೆದ.

– **ಸಿ. ಪಂಪಣ್ಣ**, ಶಿಕ್ಷಕರು,ಗೂಡಹತ್ತಿ ಗ್ರಾಮ

5ನೇ ಪುಟದಿಂದ...

**ಕಿಮ್ಮನೆಯವರಿಗೊಂದು ಪತ್ರ**

ಶೈಕ್ಷಣಿಕವಾಗಿ ಅತ್ಯಂತ ಅನುಭವ ಹೊಂದಿದ ರಾಜಕೀಯೇತರ ವ್ಯಕ್ತಿಗಳನ್ನು ಮಾತ್ರ ತಮ್ಮ ಸಲಹಾಕಾರರನ್ನಾಗಿ ಇಟ್ಟುಕೊಂಡರೆ ರಾಜ್ಯದ ಶಿಕ್ಷಣಕ್ಕೆ ಒಳ್ಳೆಯದಾಗಬಹುದು ಎಂದು ನಮಗೆ ಅನಿಸುತ್ತದೆ.

ಹಿಂದಿನ ಸರಕಾರದಲ್ಲಿ ಶಿಕ್ಷಣ ಮಂತ್ರಿಯಾಗಿದ್ದ ಸನ್ಮಾನ್ಯ ವಿಶ್ವೇಶ್ವರ ಹೆಗ್ಡೆ ಕಾಗೇರಿಯವರಿಗೂ ನಾವು ಇದೇ ಸಲಹೆ ನೀಡಿದ್ದೆವು. ಅವರು ಸಚಿವರಾದ ಹೊಸದರಲ್ಲಿ ಮಾಧ್ಯಮಿಕ ಶಿಕ್ಷಕ ಸಂಘದ ಪ್ರಮುಖರ ನಿಯೋಗ ಅವರನ್ನು ಭೇಟಿಮಾಡಿ ಅಭಿನಂದನೆ ಸಲ್ಲಿಸಿ, ಸಜ್ಜನ ವಿದ್ವಾಂಸರ ರಾಜ್ಯ ಮಟ್ಟದ ಸಲಹಾ ಸಮಿತಿ ರಚನೆ ಮಾಡಿ ಅವರ ಸಲಹೆ ಪಡೆದು ತಮ್ಮ ಸ್ವಂತ ವಿವೇಚನೆಯಿಂದ ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ದೂರಗಾಮಿ ಪರಿಣಾಮ ಬೀರುವ ನಿರ್ಣಯ ತೆಗೆದುಕೊಳ್ಳಲು ವಿನಂತಿಸಿದ್ದೆವು. ಆದರೆ ಅದನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಪರಿಣಾಮ ಗೊತ್ತಲ್ಲ? ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕ ಅಗ್ರಸ್ಥಾನದಲ್ಲಿ ಬರುವಂತೆ ಮಾಡುವಲ್ಲಿ ತಾವು ಸಫಲರಾದರೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮೇಲೆ ಇಟ್ಟ ಭರವಸೆ ಸಮರ್ಥನೀಯವಾಗುತ್ತದೆ. ವಯೋಸಹಜವಾಗಿ ಮರೆಗುಳಿತನದಿಂದ ಬಳಲುತ್ತಿರುವ, ಆದರೆ ಮನಸ್ಸಿನಲ್ಲಿ ತಾನಿನ್ನೂ ಹದಿಹರೆಯವನೆಂದು ಭಾವಿಸುತ್ತ ಹೆಣ್ಣು ಮಕ್ಕಳೇ ತನ್ನ ದೌರ್ಬಲ್ಯವೆಂದು ಪತ್ರಿಕೆಗಳಿಗೆ ಹೇಳಿಕೆ ನೀಡುವ ಯು.ಆರ್. ಅನಂತಮೂರ್ತಿ ಯಂತಹವರಿಗೆ ವಿದೇಶಕ್ಕೆ ಹೋಗಲು ವಿಮಾನದ ಟಿಕೆಟ್ ತೆಗೆಸಿಕೊಟ್ಟರೆ ಅವರಿಗೂ ನಮಗೂ ಅನುಕೂಲವಾದೀತು.

ನಿಮ್ಮದೇ ಕುರ್ಚಿಯಲ್ಲಿ ಕುಳಿತಿದ್ದ ರಾಜ್ಯದ ಪೂರ್ವ ಶಿಕ್ಷಣಮಂತ್ರಿ ಹೆಚ್.ಜಿ. ಗೋವಿಂದೇಗೌಡರು ತಮ್ಮ ಸರಳತನದಿಂದ ಮತ್ತು ಕೆಲವೇ ನಿರ್ದಿಷ್ಟ ಮತ್ತು ವಿಶಿಷ್ಟ ನಿರ್ಣಯಗಳಿಂದ ಶಿಕ್ಷಕರ ಮನ ಗೆದ್ದಿದ್ದರು 29 ವರ್ಷಗಳಿಗಿಂತಲೂ ಹೆಚ್ಚಿನ ವಯೋಮಾನದ ಶಿಕ್ಷಕರ ನೇಮಕಾತಿಗೆ ಅವಕಾಶ ನೀಡಿದ್ದನ್ನು ಇಂದಿಗೂ ಸ್ಮರಿಸುತ್ತಿದ್ದಾರೆ. ತಾವು ಎಷ್ಟು ಕಾಲ ಶಿಕ್ಷಣ ಮಂತ್ರಿ ಯಾಗಿರುತ್ತೀರೋ ಗೊತ್ತಿಲ್ಲ. ಇರುವ ಒಂದೊಂದು ದಿನವೂ ಪ್ರಮುಖವೆಂದು ತಿಳಿದು ಸಮಸ್ಯೆಗಳ ಪರಿಹಾರಕ್ಕಾಗಿ ತೆಗೆದು ಕೊಳ್ಳುವ ನಿರ್ಣಯವನ್ನು ಸರಿಯಾಗಿ ಅಳೆದು, ತೂಗಿ ತೆಗೆಯುವುದಲ್ಲದೆ ಅವುಗಳ ಕಾರ್ಯಾನ್ವಯಕ್ಕಾಗಿ ಭ್ರಷ್ಟಾಚಾರ ರಹಿತ ವ್ಯವಸ್ಥೆಯನ್ನು ರೂಪಿಸಬೇಕೆಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ವಿನಂತಿಸುತ್ತದೆ. ●

# ಪ್ರಾಥಮಿಕ ಶಾಲಾ ಹಂತದಲ್ಲಿ ಇಂಗ್ಲೀಷ್ ಭಾಷಾ ಬೋಧನೆ

■ ಡಾ. ನಿಕೇತನ
ಉಡುಪಿ

ಕಳೆದ ಸಂಚಿಕೆಯಿಂದ...

**ದೃಷ್ಟಾಂತ 2 :** ಹಾಗೆಯೇ ಇತ್ತೀಚೆಗೆ ಕೆ.ಇ.ಬಿ ಯಂಥ ಸಂಸ್ಥೆಯಲ್ಲಿ ತನ್ನ ಗಂಡನ ಮರಣಾನಂತರ ಅನುಕಂಪದ ಆಧಾರದಲ್ಲಿ ಉದ್ಯೋಗ ಗಿಟ್ಟಿಸಿಕೊಂಡ ಒಬ್ಬನೇ ಮಗನನ್ನು ಪಡಿದಿರುವ ತಾಯಿ ತನ್ನ ಮಗನನ್ನು ಕನ್ನಡ ಮಾಧ್ಯಮದಲ್ಲಿ ಓದಿಸುತ್ತಿರುವುದರ ಬಗ್ಗೆ ಹೇಳಿಕೊಂಡ ಮಾತುಗಳೂ ಚಿಂತನಾರ್ಹ.' ಕನ್ನಡ ಮಾಧ್ಯಮದಲ್ಲಿ ಕಲಿತರೆ ಆತ ಏನಾದರೂ ಉದ್ಯೋಗ ಮಾಡಿಯಾನು, ಸ್ವಾವಲಂಬಿಯಾಗಿ ಬದುಕಿಯಾನು ಎಂಬ ಭರವಸೆ ನನಗಿದೆ. ಪಡಬಾರದ ಕಷ್ಟಪಟ್ಟು ಆತನನ್ನು ಇಂಗ್ಲೀಷ್ ಮೀಡಿಯಂನಲ್ಲಿ ಓದಿಸಿ ನಾಳೆ ಆತ ಯಾವ ಕೆಲಸಕ್ಕೂ ಹೋಗಲಾರದ ಅತಂತ್ರ ಸ್ಥಿತಿಗೇನಾದರೂ ಹೋದರೆ ಎಂಬ ಭಯವೇ ನನ್ನನ್ನು ಆತನನ್ನು ಕನ್ನಡ ಮಾಧ್ಯಮಕ್ಕೆ ಸೇರಿಸಲು ಪ್ರಚೋದಿಸಿತು" ಎಂದಿದ್ದಾರೆ.

ಹಾಗೆಯೇ ನನ್ನ ಇನೋರ್ವ ಸ್ನೇಹಿತೆ, ಕನ್ನಡ ಮಾಧ್ಯಮದಲ್ಲಿ ಕಲಿಸುತ್ತಿರುವ ಶಿಕ್ಷಕಿ, ತನ್ನ ಮಗಳನ್ನು ಇಂಗ್ಲೀಷ್ ಮಾಧ್ಯಮಕ್ಕೆ ಸೇರಿಸಿದುದರ ಬಗ್ಗೆ ಹೀಗೆ ಹೇಳಿಕೊಳ್ಳುತ್ತಾಳೆ: "ಯಾವಾಗಲೂ ಮಕ್ಕಳ ಪ್ರಾಥಮಿಕ ವಿದ್ಯಾಭ್ಯಾಸದ ತಳಹದಿ ಗಟ್ಟಿಯಾಗಿರಬೇಕು. ಕನ್ನಡ ಮಾಧ್ಯಮದಲ್ಲಿ ಒಳ್ಳೆಯ ಅಂಕಗಳನ್ನು ಪಡೆದ ಪ್ರತಿಭಾವಂತರಾದ ನನ್ನ ವಿದ್ಯಾರ್ಥಿಗಳು ಇಂಗ್ಲೀಷ್ ಭಾಷೆಯ ಪ್ರಾವಿಣ್ಯತೆ ಇಲ್ಲದೇ ಸೊರಗಿರುವುದರ ದೃಷ್ಟಾಂತಗಳನ್ನು ಕಂಡು ನಾನು ಈ ನಿಲುವಿಗೆ ಬಂದಿದ್ದೇನೆ." ಎಂದು ಪ್ರಾಮಾಣಿಕವಾಗಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ. ಬಹುಶಃ ಅವರ ಈ ನಿಲುವು ಇಂದಿನ ಅನೇಕ ಸರಕಾರವೇ ಇಂಗ್ಲೀಷ್ ಅನ್ನು ಒಂದನೇ ತರಗತಿಯಿಂದ ಬೋಧಿಸುವ ವಿಚಾರಕ್ಕೆ ತನ್ನನ್ನು ಮುಂದು ಮಾಡಿದೆ. ಆದರೆ ವಾಸ್ತವವಿರುವುದು ಈ ಎರಡರ ನಡುವಿನಲ್ಲಿ. ಅದನ್ನು ಅರ್ಥೈಸಿಕೊಳ್ಳುವ ಗೋಜಿನಲ್ಲಿ ನಾವ್ಯಾರೂ ಇಲ್ಲದಿರುವುದು ದುರಂತ.

ಇಂದು ಇಂಗ್ಲೀಷ್ ವರ್ಸಸ್ ಕನ್ನಡ ಎಂದಾಗಿದೆ. ನಮ್ಮ ಜನರಲ್ಲೂ ಈ ರೀತಿಯ ಮನೋಭಾವವಿರುವುದನ್ನು ಗಮನಿಸಬಹುದು. ಇಂಗ್ಲೀಷ್ ಕಲಿಯುವವರು ಕನ್ನಡ ಕಲಿಯಬಾರದು. ಅದು ಇಂಗ್ಲೀಷಿನಲ್ಲಿ ಕಲಿಕೆಗೆ ಅಪಾಯಕಾರಿ ಎಂಬ ಮನೋಭಾವವಿದೆ. ಇದರಿಂದ ಸಹಜವಾಗಿಯೇ ಇಂಗ್ಲೀಷ್ ಕಲಿಯುವ ವಿದ್ಯಾರ್ಥಿಯಲ್ಲಿ ಕನ್ನಡದ ಬಗ್ಗೆ ಉಪೇಕ್ಷೆ ಮತ್ತು ನಿರ್ಲಕ್ಷ್ಯವನ್ನು ಮೂಡಿಸಲಾಗುತ್ತಿದೆ. ಇದರಿಂದ ಅವರು ಇಂಗ್ಲೀಷಿನೊಂದಿಗೆ ಸಹಜ ಕನ್ನಡವನ್ನು ಕಲಿಯುವ ಬದಲಾಗಿ ಕಂಗ್ಲೀಷ್‌ನ್ನು ಕಲಿತು ವಿಚಿತ್ರವಾಗಿ ಮಾತನಾಡುವ ಪರಂಪರೆಯೊಂದನ್ನು ಬೆಳೆಸುತ್ತಿದ್ದಾರೆ. ಈ ಪರಂಪರೆಯ ಬೆಳವಣಿಗೆಗೆ ಮುಖ್ಯ ಕಾರಣ ಇಂಗ್ಲೀಷಿನ ಭಯ ಸೃಷ್ಟಿಯಾಗಿದೆ. ಇದೂ ಒಳ್ಳೆಯದಲ್ಲ.

ಆದರೆ ವಾಸ್ತವ ಹಾಗಿಲ್ಲ. ಕನ್ನಡ ಮಾಧ್ಯಮದಲ್ಲಿ ಕಲಿತವರು ಇಂಗ್ಲೀಷ್ ಅನ್ನು ಆಸಕ್ತಿಯಂದ ಕಲಿತು ಸಹಜವಾಗಿ ಸುಂದರವಾಗಿ, ನಿರರ್ಗಳವಾಗಿ ಇಂಗ್ಲೀಷ್ ಮಾತನಾಡುವ ಹಲವು ಉದಾಹರಣೆಗಳಿವೆ. ಹಾಗೆಯೇ ಇಂಗ್ಲೀಷ್ ಮಾಧ್ಯಮದಲ್ಲಿ ಕಲಿತರೂ ಸುಂದರವಾಗಿ ಸಹಜ ಕನ್ನಡವನ್ನು ಮಾತನಾಡುವ ವ್ಯಕ್ತಿಗಳನ್ನು ಗುರುತಿಸಬಹುದಾಗಿದೆ. ಅಂದರೆ ಇಂಗ್ಲೀಷ್ ಅಥವಾ ಕನ್ನಡದಲ್ಲಿ ಮಾಡನಾಡುವ ಮತ್ತು ಸ್ವಲ್ಪಮಟ್ಟಿಗೆ ಬರೆಯುವ ಪ್ರಾವಿಣ್ಯತೆ ಬರುವುದು. ಅದನ್ನು ನಾವು ಸ್ವೀಕರಿಸುವ, ನೋಡುವ ಮತ್ತು ವ್ಯವಹಾರ ಪರಿಸರಕ್ಕೆ ಅಗತ್ಯವಿರುವ ಉಪಯುಕ್ತತೆಯ ಕಾರಣದಿಂದ. ಅಂದರೆ ಇಂಗ್ಲೀಷ್ ವರ್ಸಸ್ ಕನ್ನಡ ಎಂಬ ಮನೋಭಾವದಿಂದ ನಾವು ಹೊರಬಂದು ವಾಸ್ತವವನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಅದು ಪ್ರಾಥಮಿಕ ಶಾಲೆಯಲ್ಲಿ ಮಾತೃಭಾಷೆ ಅಂದರೆ ಕನ್ನಡವನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದರಲ್ಲಿದೆ. ಆದರೆ, ನಮ್ಮಲ್ಲಿ ಇಂದೂ ಅದು ಸಾಧ್ಯವಾಗಿಲ್ಲ, ಯಾಕೆಂದರೆ ನಮ್ಮ ರಾಜಕಾರಣಿಗಳಿಂದ ಹಿಡಿದು ಜನಸಾಮಾನ್ಯರವರೆಗೂ ಈ ಇಂಗ್ಲೀಷ್ ವರ್ಸಸ್ ಕನ್ನಡ ಎಂಬ ರೋಗ ತೀವ್ರವಾಗಿ ಬಾಧಿಸುತ್ತಿದೆ. ಇದರಿಂದ ಮಾತೃಭಾಷೆಯನ್ನು ಪ್ರಾಥಮಿಕ ಹಂತದಲ್ಲಿ ಖಚಿತವಾಗಿ ಅನುಷ್ಠಾನಗೊಳಿಸುವ ಕ್ರಮವನ್ನು ಸುಪ್ರಿಂಕೋರ್ಟಿನ ನಿರ್ದೇಶನ ಇದಾಗ್ಯೂ ಜಾರಿ ತರಲು ನಮಗೆ ಸಾಧ್ಯವಾಗಿಲ್ಲ. ಈ ಬಗ್ಗೆ ಹೈಕೋರ್ಟಿನಲ್ಲಿರುವ ತಡೆಯಾಜ್ಞೆಯನ್ನು ತೆರವುಗೊಳಿಸಿ ಅನುಷ್ಠಾನಗೊಳಿಸುವ ಇಚ್ಛಾಶಕ್ತಿಯನ್ನು ನಮ್ಮ ಯಾವ ಸರಕಾರಗಳೂ ತೋರಿಲ್ಲ. ಯಾಕೆಂದರೆ ನಮ್ಮ ರಾಜಕಾರಣಿಗಳೆಲ್ಲಾ ಇಂಗ್ಲೀಷ್ ಪರವಾಗಿರುವವರು. ಇಲ್ಲವೇ ಓಟಿಗಾಗಿ ಅಲ್ಪಸಂಖ್ಯಾತರ ಭಾಷೆಗಳನ್ನು ಅನಿವಾರ್ಯವಾಗಿ ಓಲೈಸುವವರು. ಇದನ್ನು ಮೊದಲು ತೆಗೆದರೆ ತೊಂದರೆಯಾಗಲಾರದು. ಇಲ್ಲವಾದರೆ ಈ ಇಂಗ್ಲೀಷ್ ವರ್ಸಸ್ ಕನ್ನಡದ ಅತಂತ್ರ ಸ್ಥಿತಿಯನ್ನು ಎದುರಿಸುವ ಸಾಧ್ಯತೆಯಿದೆ. ಮಾತೃಭಾಷೆಯನ್ನು ಪರಿಣಾಮಕಾರಿಯಾಗಿ ಪ್ರಾಥಮಿಕ ಶಿಕ್ಷಣದಲ್ಲಿ ಜಾರಿಗೆ ತಂದು ಇಂಗ್ಲೀಷ್ ಅನ್ನು ಕಲಿಸುವ ಏರ್ಪಾಡು ಮಾಡಬೇಕಾದುದು ಇಂದಿನ ವಾಸ್ತವ.

ಬಹುಶಃ ದುಡ್ಡೇ ದೊಡ್ಡಪ್ಪ ಎಂಬ ನಿಲುವು ಬದಲಾಗಿ ಶಾಂತಿ, ಸಹನೆ, ಅಹಿಂಸೆ ಸಮಾಧಾನವೇ ಸುಖವೆಂಬ ಸೂತ್ರ ಸಿದ್ಧಾಂತವಾಗಲು ಬಹಳ ಸಮಯವೇನೂ ಬೇಕಿಲ್ಲ. ಯಾಕೆಂದರೆ ದುಡ್ಡನ್ನು ಸಂಪಾದಿಸಿ ಆಯಿತು. ಆದರೆ ನೆಮ್ಮದಿ ಎಲ್ಲಿ ಎಂಬ ಪ್ರಶ್ನೆ ಬಂದಾಗ ನಾವು ಸಾಹಿತ್ಯ, ಸಂವೇದನೆ, ಸೃಜನಶೀಲತೆಗಳ ಮೊರೆ ಹೋಗುತ್ತೇವೆ. ಎಷ್ಟು ಬೆಲೆಯನ್ನು ತೆತ್ತಾದರೂ ಅದನ್ನು ಪಡೆಯುವತ್ತ ಧಾವಿಸುತ್ತೇವೆ. ಆ ದಿನದಲ್ಲಿ ಮನುಷ್ಯ ಮನುಷ್ಯರ ನಡುವೆ ಕಂದಕವನ್ನು ನಿರ್ಮಿಸುತ್ತಿರುವ ಇಂದಿನ ಇಂಗ್ಲೀಷ್ ಭಾಷೆಯಾಧಾರಿತ ಪಾಶ್ಚಾತ್ಯ ಸಂಸ್ಕೃತಿಗಿಂತ ನಮ್ಮ ನೆಲದ, ನಮ್ಮ ಮಣ್ಣಿನ ಸಂಸ್ಕೃತಿಯತ್ತ ನಾವು ಮುಖ ಮಾಡುತ್ತೇವೆ. ಹೀಗಾಗಿ ಈ ಬಗ್ಗೆ ಆಸಕ್ತಿ ಮೂಡಿಸುವ, ಚಿಂತನೆಗೆ ಹಚ್ಚುವ ಈ ನೆಲದ ಭಾಷಾ ಮಾಧ್ಯಮವಾದ ಕನ್ನಡವನ್ನು ಅರಳಿಸುವ, ಕನ್ನಡವನ್ನು ಪರಿಣಾಮಕಾರಿಯಾಗಿ ಬೋಧಿಸುವ ಕಾರ್ಯವೂ ಇಂದಿನ ಇಂಗ್ಲೀಷ್ ಅನ್ನು ಒಂದನೆಯ ತರಗತಿಯಿಂದ ಬೋಧಿಸುವ ತುರ್ತಿನಷ್ಟೇ ಅಗತ್ಯ ಎಂಬುದು ನನ್ನ ಅಭಿಪ್ರಾಯ.

(ಮುಗಿಯಿತು)

# ಜೀವನ ಮೌಲ್ಯಗಳನ್ನು ಕಲಿಸುವ ರೀತಿ

■ ಎಚ್ಚೆನ್ನಾರ್

ಕಳೆದ ಸಂಚಿಕೆಯಲ್ಲಿ "ಶಿಕ್ಷಕ ದಿನಾಚರಣೆ ಒಂದು ವೈಚಾರಿಕ ಮಂಥನ" ಎಂಬ ಲೇಖನದಲ್ಲಿ ಶಿಕ್ಷಕರಾದ ನಾವು ನಮ್ಮ ವೃತ್ತಿ ಜೀವನದ ಸಫಲತೆ, ವಿಫಲತೆಗಳ ಲೆಕ್ಕಾಚಾರದ ಮೂಲಕ ಆತ್ಮಶೋಧನೆಗೆ ಒಳಗಾಗಬೇಕೆಂದು ಪ್ರತಿಪಾದಿಸಿದ್ದೆ. ಲೇಖನದ ಅಂತಿಮ ಭಾಗದಲ್ಲಿ 5 ವಿಧದ ಮೌಲ್ಯಗಳು ಅಂದರೆ, ವೈಯಕ್ತಿಕ ಮೌಲ್ಯ, ಕುಟುಂಬ ಮೌಲ್ಯ, ಸಾಮಾಜಿಕ ಮೌಲ್ಯ, ರಾಷ್ಟ್ರೀಯ ಮೌಲ್ಯ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಒಡಮೂಡಿಸುತ್ತಾ ಅವರನ್ನು ಸುಯೋಗ್ಯ ನಾಗರೀಕರನ್ನಾಗಿ ರೂಪಿಸುವಲ್ಲಿ ನಮ್ಮ ಪಾತ್ರವಿದೆಯಲ್ಲವೇ ? ಎಂಬ ಪ್ರಶ್ನೆಯನ್ನೂ ಕೇಳಿದ್ದೆ.

ಕಳೆದ ತಿಂಗಳ 26, 27 ಮತ್ತು 28 ರಂದು ಮಹಾರಾಷ್ಟ್ರದ ನಾಗಪುರದಲ್ಲಿ ಒಂದು ಶೈಕ್ಷಣಿಕ ಚಿಂತನ ಸಭೆಯಲ್ಲಿ ಭಾಗವಹಿಸುವ ಅವಕಾಶ ದೊರೆತಿತ್ತು. ದೆಹಲಿಯ ಪ್ರತಿನಿಧಿಯೊಬ್ಬರು ತಮ್ಮ ವಿಚಾರವನ್ನು ಮಂಡಿಸುತ್ತಾ, "ಇಂದು ದೇಶದ ರಾಜಧಾನಿ ದೆಹಲಿಯು 'ಕ್ರೈಂ ಕ್ಯಾಪಿಟಲ್' ಎಂಬ ಹೆಸರನ್ನು ಪಡೆಯುತ್ತಿದೆ. ಇದರಿಂದ ಇಡೀ ದೇಶವೇ ಜಗತ್ತಿನೆದುರು ತಲೆ ತಗ್ಗಿಸುವಂತಾಗಿದೆ. ಇದಕ್ಕೆ ಕಾರಣವೆಂದರೆ ನಮ್ಮ ಶಿಕ್ಷಣ ಕ್ರಮದಲ್ಲಿ ಮೌಲ್ಯ ಶಿಕ್ಷಣವನ್ನು ಸೇರಿಸದೇ ಇರುವುದು. ಹೀಗಾಗಿ ಈ ಹಿಂದಿನ ಒಂದೆರೆಡು ಪೀಳಿಗೆಗಳಲ್ಲಿ ಯಾವ ಬಗೆಯ ನಾಗರೀಕ ಮೌಲ್ಯಗಳೂ ಮೈಗೂಡದೆ ಅವರು ಸಮಾಜ ಕಂಟಕರಾಗಿ ಬೆಳೆದಿರುವುದು. ಈ ವಿಷಯವನ್ನು "ದೆಹಲಿ ಅಧ್ಯಾಪಕ ಪರಿಷತ್" ಎಂಬ ಶಿಕ್ಷಕ ಸಂಘಟನೆಯು, ದೆಹಲಿ ರಾಜ್ಯದ ಅಧಿಕಾರಿಗಳು, ಶಿಕ್ಷಣ ಮಂತ್ರಿ ಹಾಗೂ ಮುಖ್ಯಮಂತ್ರಿಗಳಾದ ಶ್ರೀಮತಿ ಶೀಲಾ ದೀಕ್ಷಿತ್ ಅವರಲ್ಲಿ ಚರ್ಚಿಸಿದಾಗ ಅವರು ಈಗಾಗಿರುವ ತಮ್ಮ ತಪ್ಪುಗಳನ್ನು ಒಪ್ಪಿಕೊಂಡು ಮುಂದಿನ ಶೈಕ್ಷಣಿಕ ವರ್ಷದಿಂದ ಶಾಲಾ ಪಠ್ಯದಲ್ಲಿ ನೈತಿಕ ಶಿಕ್ಷಣವನ್ನು ಸೇರಿಸುವುದಾಗಿ ಆಶ್ವಾಸನೆ ಕೊಟ್ಟಿದ್ದಾರೆ. ಇದೇ ರೀತಿ ಹಿಮಾಚಲ ಪ್ರದೇಶದ ಸರ್ಕಾರವು ಈ ವರ್ಷದಿಂದಲೇ ನೈತಿಕ ಶಿಕ್ಷಣದ ಪಠ್ಯ ಪುಸ್ತಕಗಳನ್ನು ಮುದ್ರಿಸಿ ಶಾಲೆಗಳಲ್ಲಿ ಅದನ್ನು ಕಲಿಸುವ ವ್ಯವಸ್ಥೆ ಮಾಡಿದೆ.

ಇಂದಿನ ನಮ್ಮ ಶಿಕ್ಷಣದಲ್ಲಿ ಮೌಲ್ಯ ಶಿಕ್ಷಣವನ್ನು ಸೇರಿಸದೇ ಇರುವುದೇ ಭ್ರಷ್ಟಾಚಾರ, ಅತ್ಯಾಚಾರ ಮುಂತಾದ ಸಾಮಾಜಿಕ ಸಮಸ್ಯೆಗಳಿಗೆ ಕಾರಣವೆಂದು ಆಡಳಿತ ನಡೆಸುವವರು ಒಪ್ಪಿಕೊಂಡದ್ದೇ ಆಯಿತು. ನಮ್ಮ ತಥಾಕಥಿತ "ಸೆಕ್ಯುಲರ್ ರಾಜಕಾರಣಿಗಳಿಗೆ ಕೊನೆಗಾದರೂ ಮತಾಚರಣೆಗೂ, ಜೀವನ ಮೌಲ್ಯಗಳಿಗೂ ಇರುವ ವ್ಯತ್ಯಾಸದ ಅರಿವುಂಟಾಗಿ ಅದನ್ನು ಮಕ್ಕಳಿಗೆ ಕಲಿಸಬೇಕಾದ ಇಂದಿನ ಅಗತ್ಯತೆಯನ್ನು ಮನಗಂಡಿದ್ದು ತುಂಬಾ ಸಂತೋಷದ ಸಂಗತಿ.

ಈಗ ವೈಯಕ್ತಿಕ ಮೌಲ್ಯಗಳನ್ನು ಕಲಿಸುವ ವಿಚಾರಕ್ಕೆ ಬರೋಣ.

ವೈಯಕ್ತಿಕ ಮೌಲ್ಯಗಳೆಂದರೆ (Individual Values) ವ್ಯಕ್ತಿಯೊಬ್ಬ ತನ್ನ ನಿತ್ಯ ಜೀವನದಲ್ಲಿ ಅನುಸರಿಸಬೇಕಾದ ನೀತಿ ಸಂಹಿತೆ. ತಾನು ಮಾಡಬೇಕಾದ್ದು, ಮಾಡಬಾರದ್ದು (Do's & Don'ts) ಎಂಬ ವಿಧಿ ನಿಷೇಧ. ಉದಾಹರಣೆಗಾಗಿ ಸತ್ಯ ಹೇಳುವುದು, ಸುಳ್ಳನ್ನು ಹೇಳದಿರುವುದು, ಇನ್ನೊಬ್ಬರ ಮನಸ್ಸನ್ನು ನೋಯಿಸದಿರುವುದು, ಪರರ ಸ್ವತ್ತನ್ನು ಆಶಿಸದಿರುವುದು, ಪ್ರಾಮಾಣಿಕತೆ, ಶರೀರ, ಮನಸ್ಸು ಮತ್ತು ಬುದ್ಧಿಗಳ ಸ್ವಚ್ಛತೆ, ಕ್ರೀಯಾಶೀಲತೆ, ಕಾಯಕ ನಿಷ್ಠೆ, ಹೀಗೆ ಇದನ್ನು ಬೆಳೆಸುತ್ತಾ ಹೋಗಬಹುದು.

ಈ ಎಲ್ಲಾ ಗುಣಗಳನ್ನು ನಾವು ವಿದ್ಯಾರ್ಥಿಗಳಲ್ಲಿ ಬಾಲ್ಯದಿಂದಲೇ ಬೆಳೆಸಬೇಕು. ಹಿಂದೆ ಈ ಕೆಲಸವನ್ನು ಮನೆಯಲ್ಲೇ ಮಾಡುತ್ತಿದ್ದರು. ಆಗ ಮನೆಗಳಲ್ಲಿ ಅಜ್ಜಿ, ತಾತ, ದೊಡ್ಡಪ್ಪ, ದೊಡ್ಡಮ್ಮ, ಚಿಕ್ಕಮ್ಮ ಚಿಕ್ಕಪ್ಪ ಹೀಗೆ ಅನೇಕರು ಇರುತ್ತಿದ್ದರು, ಮಾರ್ಗದರ್ಶನ ಮಾಡುತ್ತಿದ್ದರು. ಆದರೆ ಇಂದಿನ ನ್ಯೂಕ್ಲಿಯಸ್ ಪರಿವಾರ ಹಾಗೂ ಬಿಡುವಿಲ್ಲದ ದಿನಚರಿಯಲ್ಲಿ ತಂದೆ-ತಾಯಂದಿರಿಗೆ ಇದನ್ನು ಹೇಳಿಕೊಡಲು ವ್ಯವಧಾನವಾದರೂ ಎಲ್ಲಿದೆ ? ಹೀಗಾಗಿ ಭಾವೀ ಪೀಳಿಗೆಯನ್ನು ಶಿಕ್ಷಿತಗೊಳಿಸಬೇಕಾದ ನಾವೇ ಈ ಹೊಣೆಯನ್ನು ಹೊರಬೇಕಲ್ಲವೇ ?

ಪ್ರಾಮಾಣಿಕತೆ ಮಕ್ಕಳಲ್ಲಿ ಬೆಳೆಸಬೇಕಾದ ಒಂದು ಉತ್ತಮವಾದ ಮೌಲ್ಯ. 60 ವರ್ಷಗಳ ಹಿಂದೆ ನಾವು ಶಾಲೆಯಲ್ಲಿ ಓದುತ್ತಿದ್ದಾಗ ನಮ್ಮ ಅಧ್ಯಾಪಕರು ಕಥೆಗಳ ಮೂಲಕ ಈ ಗುಣವನ್ನು ನಮ್ಮ ಮನಸ್ಸಿನಲ್ಲಿ ಬಿತ್ತಿದ್ದು ನೆನಪಿಗೆ ಬರುತ್ತಿದೆ. ಆ ಕಥೆ ನನ್ನ ಮನಸ್ಸಿನಲ್ಲಿ ಹಚ್ಚಹಸಿರಾಗಿದೆ. ಆ ಕಥೆ ಮುಂದಿನ ಸಂಚಿಕೆಯಲ್ಲಿ....

## ವಿದ್ಯಾರ್ಥಿ ಮಿತ್ರ

ನವೆಂಬರ್ ಸಂಚಿಕೆಯಿಂದ ಹೊಸ ಸಂಪುಟದ ಒಂದು ಪುಟವನ್ನು ವಿದ್ಯಾರ್ಥಿಗಳಿಗಾಗಿ ಮೀಸಲಿಡಲು ಸಂಪಾದಕ ಮಂಡಳಿಯು ನಿರ್ಧರಿಸಿದೆ. ಈ ಪುಟದಲ್ಲಿ ವಿದ್ಯಾರ್ಥಿಗಳಿಗೆ ಬೇಕಾದ ಮಾಹಿತಿಗಳು, ರಸಪ್ರಶ್ನೆ, ಪದಬಂಧ, ಮುಂತಾದ ಆಕರ್ಷಕ ವಿಷಯಗಳು ಇರುತ್ತವೆ. ಈ ವಿಷಯಗಳ ಬಗ್ಗೆ ಆಸಕ್ತಿ ಇರುವ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಶಿಕ್ಷಕ ಸಮಾಚಾರಕ್ಕೆ ಬರೆದು ಕಳುಹಿಸಬಹುದು.

# ಚಿತ್ರ ಸುದ್ದಿ



ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆಯಾಗಿ ಪುರಸ್ಕೃತರಾದ ಬೆಂಗಳೂರು ಉತ್ತರ ಜಿಲ್ಲೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ನಾರಾಯಣ ಅನಂತ ಭಟ್ಟ



ಬೆಳಗಾಂನಲ್ಲಿ ನಡೆದ ರಾಜ್ಯ ಕಾರ್ಯಕಾರಿಣಿ ಸಭೆಯ ಉದ್ಘಾಟನೆ




ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ
ತಿಲಕವಾಡಿ ಪ್ರೌಢಶಾಲಾ ಮಕ್ಕಳಿಂದ ಸರಸ್ವತಿ ವಂದನೆ

Reg. No. RNI 45459/85
CPMG/KA/BGS-125/2012-14
Posted at Bangalore GPO
Bangalore - 560 001

**OCTOBER 2013**
Date of Posting
20th or 21st of every month

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

**D.P.I. (Sepecial)** ಅವರ ಆದೇಶ ಸಂಖ್ಯೆ **T3-LBS-RKM-7/79-80** ದಿನಾಂಕ **20-6-1980** ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ ''ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ'' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.

srushtidesigns@gmail.com